ತುಳುನಾಡಿನಲ್ಲಿ ಬ್ರಾಹ್ಮಣ್ಯ
ದಿ। ಪ್ರೊ। ಗುರುರಾಜ ಭಟ್ಟರ ಕೃತಿಯಿಂದ ಸಂಗ್ರಹಿಸಿದ ಭಾಗ (ಸಂಗ್ರಹ : ಸಿ.ಎಸ್.ರಾವ್.)
ಪುಟ-5

ಏರ್ಮಾಳು : ಯಕ್ಷಗಾನ-ಯಕ್ಷಗುಚ್ಛ ಪ್ರಸಂಗ ಪುಸ್ತಕ ಬಿಡುಗಡೆ
ಪುಟ-6



ಉಡುಪಿ : ಕರಾವಳಿ ಕರ್ನಾಟಕದ 'ರಂಗೋಲಿ ಕಲೆ' ಬಿಡುಗಡೆ
ಪುಟ-6

ಮಾರ್ಪಳ್ಳಿ ಮಂಜುನಾಥ್‌ರ ಹತ್ತೊಂಬತ್ತನೆಯ ಕೃತಿ 'ಕೊಂಡಿಕಳಚುತ್ತಿದೆ' ಪುಸ್ತಕ ಬಿಡುಗಡೆ ಮತ್ತು ಸನ್ಮಾನ
ಪುಟ-7

# ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ-2012 : ವಿಚಾರಗೋಷ್ಠಿಗಳ ಸಂಕ್ಷಿಪ್ತ ವರದಿ

ವರದಿ : **ಡಾ.ವೈ ಸುದರ್ಶನ ರಾವ್**
ಸಂಚಾಲಕರು, ವಿಚಾರಗೋಷ್ಠಿಗಳು,
ಅ.ಭಾ.ಸ್ಥಾ.ಬ್ರಾ. ಸಮಾವೇಶ-2012

ತಾ.12-05-2012 ಹಾಗೂ 13-05-2012 ರಂದು ಜರುಗಿದ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ -2012 ರಲ್ಲಿ ಪ್ರಾಮುಖ್ಯ ಪಡೆದ ಕಾರ್ಯಕ್ರಮಗಳಲ್ಲಿ ವಿಚಾರ ಗೋಷ್ಠಿಯೂ ಒಂದಾಗಿತ್ತು. ಸಮಾವೇಶದ ಸಂಘಟಕರು ಆರಿಸಿದ್ದ ನಾಲ್ಕು ಚರ್ಚಾ ವಿಷಯಗಳಾದ 1) ಸ್ಥಾನಿಕ ಬ್ರಾಹ್ಮಣರ ಆಡಳಿತದಲ್ಲಿರುವ ದೇವಸ್ಥಾನಗಳು ಮತ್ತು ಅವುಗಳ ಸಮಸ್ಯೆಗಳು 2) ಸ್ಥಾನಿಕ ಬ್ರಾಹ್ಮಣರಲ್ಲಿ ವೈದಿಕತನದ ಉಳಿವಿಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು 3) ಸ್ಥಾನಿಕ ಬ್ರಾಹ್ಮಣ ಸಮಾಜದಲ್ಲಿ ವಿವಾಹ ಸಂಬಂಧಿತ ಸಮಸ್ಯೆಗಳು ಮತ್ತು ಪರಿಹಾರ 4) ಸ್ಥಾನಿಕ ಬ್ರಾಹ್ಮಣ ಸಮಾಜದ ಅಭಿವೃದ್ಧಿಗಾಗಿ ವಿವಿಧ ಸಂಘಗಳು ಕೈಗೊಳ್ಳಬೇಕಾದ ಕ್ರಮಗಳು ಹೀಗೆ ಈ ಚರ್ಚಾ ವಿಷಯಗಳ ಮೇಲೆ ನಡೆದ ಚರ್ಚೆಯಲ್ಲಿ ಸಮಾಜಭಾಂದವರು ಆಸಕ್ತಿಯಿಂದ ಪಾಲ್ಗೊಂಡರು. ಈ ಚರ್ಚೆಗೆ ಪೂರ್ವಭಾವಿಯಾಗಿ 2000 ಜನ ನಮ್ಮ ಸಮಾಜಬಾಂಧವರಿಗೆ ಈ ಚರ್ಚಾ ವಿಷಯಗಳನ್ನು ಕಳುಹಿಸಿ ಅವರ ಅಭಿಪ್ರಾಯಗಳನ್ನು ಆಹ್ವಾನಿಸಲಾಗಿತ್ತು. ಬಂದಿದ್ದ ಅಭಿಪ್ರಾಯಗಳನ್ನೆಲ್ಲಾ ಕ್ರೋಢೀಕರಿಸಿ ಪ್ರತೀ ವಿಷಯದ ಮೇಲೆ ಈರ್ವರು ಉಪನ್ಯಾಸಕರು ವಿಷಯ ಮಂಡನೆ ಮಾಡಿದರು. ಕೊನೆಯಲ್ಲಿ ಗೋಷ್ಠಿಪತಿಗಳು ಸಭಿಕರ ಅಭಿಪ್ರಾಯವನ್ನೂ ತಿಳಿದು ವಿಷಯದ ಮೇಲಿದ್ದ ಜಿಜ್ಞಾಸೆಗಳನ್ನು ತಿಳಿಗೊಳಿಸಿದರು. ಮೊದಲನೇ ವಿಷಯದಲ್ಲಿ ಶ್ರೀ ಕಡಬ ಗೋಪಾಲ ರಾವ್ ಹಾಗೂ ಶ್ರೀ ಕರುಣಾಕರ ರಾವ್ ಬೆಳ್ಳೆ ವಿಷಯ ಮಂಡನೆಯನ್ನೂ, ಗೋಷ್ಠಿಪತಿಗಳಾಗಿ ಶ್ರೀಎನ್.ಕೆ. ಜಗನ್ನಿವಾಸ ರಾವ್ ರವರು ಭಾಗವಹಿಸಿದರು. ಎರಡನೆಯ ವಿಷಯದಲ್ಲಿ ವಿಷಯ ಮಂಡನೆಯನ್ನು ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಹಾಗೂ ಶ್ರೀ ಭಾಸ್ಕರ ಶಾಸ್ತ್ರಿ ದೇಲಂಪಾಡಿತ್ತಾಯರೂ, ಗೋಷ್ಠಿಪತಿಗಳಾಗಿ ಶ್ರೀ ಕುರಯ ಆತ್ಮಾರಾಮ ಶಾಸ್ತ್ರಿಗಳೂ ನಡೆಸಿಕೊಟ್ಟರು. ಮೂರನೆಯ ವಿಷಯದ ಬಗ್ಗೆ ವಿಷಯ ಮಂಡನೆಯನ್ನು ಶ್ರೀ ಬಿ.ಕೆ. ಧನಂಜಯ ರಾವ್ ಹಾಗೂ ಶ್ರೀಮತಿ ಸಾವಿತ್ರಿ ಮನೋಹರ ರಾವ್, ಗೋಷ್ಠಿಪತಿಗಳಾಗಿ ಶ್ರೀ ಅಜ್ಜಾವರ ಶಿವರಾವ್‌ರವರು ನಡೆಸಿಕೊಟ್ಟರು. ನಾಲ್ಕನೇ ವಿಷಯದಲ್ಲಿ ವಿಷಯ ಮಂಡನಾಕಾರರಾಗಿ ಪ್ರೊ। ವರದರಾಜ ಚಂದ್ರಗಿರಿ ಹಾಗೂ ಡಾ। ವೈ. ರವೀಂದ್ರನಾಥ ರಾವ್, ಗೋಷ್ಠಿಪತಿಗಳಾಗಿ ಡಾ। ಶೈಲಜಾ ಶಾಸ್ತ್ರಿಯವರು ಸಹಕರಿಸಿದರು. ಅಂತಿಮವಾಗಿ ತಾ.13-05-2012 ರಂದು ಸಂಜೆ ನಡೆದ ಎಲ್ಲಾ ಸಂಘಗಳ ಪದಾಧಿಕಾರಿಗಳೊಂದಿಗಿನ ಮುಕ್ತ ಚರ್ಚೆಯ ಸಂದರ್ಭದಲ್ಲಿ ಈ ಎಲ್ಲಾ ವಿಷಯಗಳ ಮೇಲೆ ಅಂಗೀಕರಿಸಲಾದ ನಿರ್ಣಯಗಳ ಪೂರ್ಣಪಾಠ ಇಂತಿದೆ.

ಸ್ಥಾನಿಕ ಬ್ರಾಹ್ಮಣರ ಆಡಳಿತದಲ್ಲಿರುವ ದೇವಸ್ಥಾನಗಳು ಮತ್ತು ಅವುಗಳ ಸಮಸ್ಯೆಗಳು

ಅ) ಸ್ಥಾನಿಕ ಬ್ರಾಹ್ಮಣರ ಆಡಳಿತದಲ್ಲಿರುವ ದೇವಸ್ಥಾನಗಳ ವೇದಿಕೆಯ ರಚನೆ

ತಾತ್ಕಾಲಿಕವಾಗಿ ಅಧ್ಯಕ್ಷರು: ಶ್ರೀ ಎನ್.ಕೆ. ಜಗನ್ನಿವಾಸ ರಾವ್, ಕಾರ್ಯದರ್ಶಿ; ಶ್ರೀ ಕರುಣ್ ಬೆಳ್ಳೆ

ಈ ವೇದಿಕೆಯ ಜವಾಬ್ದಾರಿಗಳು ಹೀಗಿವೆ :
1) ಒಂದು ತಿಂಗಳೊಳಗೆ ಎಲ್ಲಾ ಸದಸ್ಯರ ಸಭೆ ಕರೆದು ವೇದಿಕೆಯನ್ನು ಪುನರ್‌ರಚಿಸುವುದು
2) ಬೈಲಾ ರಚನೆ

ಈ ವೇದಿಕೆಯ ಗುರಿಗಳು ಹೀಗಿರಬೇಕು :
1)ನಮ್ಮ ಸಮಾಜದ ಎಲ್ಲಾ ದೇವಸ್ಥಾನಗಳ ಜೀರ್ಣೋದ್ಧಾರ ಮಾಡುವುದು 2)ಶ್ರೀ ಶೃಂಗೇರಿ ಜಗದ್ಗುರುಗಳ ಆಶೀರ್ವಾದದ ಛತ್ರದಡಿಯಲ್ಲಿಯೇ ದೇವಸ್ಥಾನವನ್ನು ನಡೆಸುವುದು 3)ದೇವಸ್ಥಾನದ ಹಳೆಯ ಹಾಗೂ ಹೊಸ ದಾಖಲೆಪತ್ರಗಳನ್ನು ನಿರ್ವಹಿಸಲು ಮಾರ್ಗದರ್ಶನ ನೀಡುವುದು 4) ದೇವಸ್ಥಾನಗಳ




ಇತಿಹಾಸ ಸಂಗ್ರಹಣೆ ಹಾಗೂ ಕೈಪಿಡಿ ರಚನೆ 5)ನಮ್ಮ ದೇವಸ್ಥಾನಗಳಲ್ಲಿ ನಮ್ಮವರೇ ಅರ್ಚಕರು ಹಾಗೂ ನಮ್ಮವರೇ ತಂತ್ರಿಗಳಾಗಿರುವಂತೆ ನೋಡಿಕೊಳ್ಳುವುದು 6)ನಮ್ಮ ದೇವಸ್ಥಾನಗಳಲ್ಲಿ ಸಾರ್ವಜನಿಕರ ಭಾಗವಹಿಸುವಿಕೆಗಾಗಿ ಸಾರ್ವಜನಿಕ ಧಾರ್ಮಿಕ ಕಾರ್ಯಕ್ರಮಗಳು ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು

ಬ) ನಮ್ಮ ಸಂಘಗಳು ಕನಿಷ್ಠಪಕ್ಷ ವರ್ಷಕ್ಕೆ ಒಂದು ಬಾರಿಯಾದರೂ ನಮ್ಮ ದೇವಸ್ಥಾನಗಳಿಗೆ ಪ್ರವಾಸ ಕೈಗೊಳ್ಳುವುದು

ಕ) ನಮ್ಮ ಸಂಘಗಳು ತಮ್ಮ ಹತ್ತಿರದ ದೇವಸ್ಥಾನಗಳಿಗೆ ತನು ಮನ ಧನದ ಸಹಕಾರ ನೀಡುವುದು

ಸ್ಥಾನಿಕ ಬ್ರಾಹ್ಮಣರಲ್ಲಿ ವೈದಿಕತನದ ಉಳಿವಿಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು :

ಅ) ವೈದಿಕರೆಂದರೆ ಕೇವಲ ಪುರೋಹಿತರೆಂದು ಅರ್ಥವಲ್ಲ, ಬ್ರಾಹ್ಮಣನೆನಿಸಿ ಕೊಂಡವರೆಲ್ಲರೂ ವೈದಿಕರೇ. ಆದುದರಿಂದ ಪ್ರತಿಯೊಬ್ಬರೂ ತಮ್ಮಲ್ಲಿ ವೈದಿಕ ಜ್ಞಾನ ಬೆಳೆಸಿಕೊಳ್ಳಬೇಕು

ಬ) ಸ್ಥಾನಿಕ ಬ್ರಾಹ್ಮಣ ವೈದಿಕರ ವೇದಿಕೆಯ ರಚನೆ

ತಾತ್ಕಾಲಿಕವಾಗಿ ಅಧ್ಯಕ್ಷರು : ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳು, ಕಾರ್ಯದರ್ಶಿ: ಬ್ರಹ್ಮಶ್ರೀ ಕೃಷ್ಣರಾಜ ಭಟ್

ಈ ವೇದಿಕೆಯ ಜವಾಬ್ದಾರಿ :

1) ಒಂದು ತಿಂಗಳೊಳಗೆ ವೇದಿಕೆಯ ಸದಸ್ಯರ ಸಭೆ ಕರೆದು ವೇದಿಕೆಯನ್ನು ಪುನರ್ರಚಿಸುವುದು 2)ವೇದಗಳಲ್ಲಿ ಆಸಕ್ತಿ ಇರುವವರನ್ನು ಗುರುತಿಸಿ, ಅದರಲ್ಲೂ ನಿವೃತ್ತರಾದವರನ್ನು, ವೇದಿಕೆಯ ಸದಸ್ಯರನ್ನಾಗಿಸುವುದು 3)ವೇದೋಪನಿಷತ್ತುಗಳನ್ನು ಕಲಿಸುವ ಶಿಬಿರಗಳನ್ನು ನಡೆಸುವುದು 4)ಶ್ರೀಶೃಂಗೇರಿ ಮಠಕ್ಕೆ ಭೇಟಿ ನೀಡುವಾಗ ವೈದಿಕರೆಲ್ಲರ ನೇತೃತ್ವ ವಹಿಸುವುದು 5)ವೇದಪಾಠ ಶಾಲೆ ಸ್ಥಾಪನೆ 6)ದೇವಸ್ಥಾನಗಳಲ್ಲಿ ಅರ್ಚಕರ ಕೊರತೆಯಾದಾಗ ತುಂಬಿಸುವುದು 7)ಸಂಧ್ಯಾವಂದನೆ ಹಾಗೂ ಪಂಚಾಯತನ ಪೂಜೆಯ ವಿಡಿಯೋ ಸಿಡಿ ರಚನೆ 8) ಸೂಕ್ತ ಸಂಭಾವನೆಯನ್ನು ನಿಗದಿಪಡಿಸಿಕೊಳ್ಳುವುದು

ಕ) ನಮ್ಮ ಸಭೆ ಸಮಾರಂಭಗಳಲ್ಲಿ ಊಟಕ್ಕೆ ಕುಳಿತುಕೊಳ್ಳುವಾಗ, ಊಟ ಬಳಸುವಾಗ ಪೂಜಾ ಸಮಯದಲ್ಲಿ ವಸ್ತ್ರಸಂಹಿತೆ ಪಾಲಿಸುವುದು.

ಸ್ಥಾನಿಕ ಬ್ರಾಹ್ಮಣ ಸಮಾಜದಲ್ಲಿ ವಿವಾಹ ಸಂಬಂಧಿತ ಸಮಸ್ಯೆಗಳು ಮತ್ತು ಪರಿಹಾರ :

ಅ) ನಮ್ಮ ಯುವಪೀಳಿಗೆಯನ್ನು ನಮ್ಮ ಸಭೆ ಸಮಾರಂಭಗಳಲ್ಲಿ ಭಾಗವಹಿಸುವಂತೆ ಮಾಡುವ ಮೂಲಕ ಹಾಗೂ ಇತರ ಉಪಕ್ರಮಗಳಿಂದ ನಮ್ಮ ಸಮಾಜದ ಮೇಲೆ ಅವರಿಗೆ ಪ್ರೀತಿ,ಅಭಿಮಾನ ಹುಟ್ಟಿಸಿ ಅವರು ಆದಷ್ಟು ನಮ್ಮ ಸಮಾಜದ ಒಳಗೇ ವಿವಾಹವಾಗುವಂತೆ ಪ್ರೋತ್ಸಾಹಿಸುವುದು.

ಬ) ಪ್ರತೀ ಸಂಘಗಳು ವಧೂವರರ ವೇದಿಕೆಯನ್ನು ರಚಿಸಿಕೊಂಡು ವಧೂವರರ ಬಗ್ಗೆ ಆದಷ್ಟು ಮಾಹಿತಿ ಅಂದರೆ ಅವರ ವಯಸ್ಸು ವಿದ್ಯಾರ್ಹತೆ ಕೆಲಸ, ಆದಾಯ, ಹವ್ಯಾಸ, ಚಟ, ಅವಿಭಕ್ತ ಕುಟುಂಬದ ಬಗ್ಗೆ ಅಭಿಪ್ರಾಯ ಇತ್ಯಾದಿ ಮಾಹಿತಿ ಸಂಗ್ರಹಿಸಿ ವಧೂವರರ ಸಮಾಲೋಚನಾ ಹಾಗೂ ಸಲಹಾ ಕೇಂದ್ರವಾಗಿ ಕಾರ್ಯನಿರ್ವಹಿಸಬೇಕು

ಕ) ವಿವಾಹಾಪೇಕ್ಷಿ ಹುಡುಗ ಹಾಗೂ ಹುಡುಗಿಯರು ತಮ್ಮ ವರ್ಚಸ್ಸು ಹಾಗೂ ವ್ಯಕ್ತಿತ್ವವನ್ನುಬೆಳೆಸಿಕೊಂಡು ಸರಿಸಮಾನರಾಗಿದ್ದು ಅಸಮಾನತೆಯನ್ನು ಹೋಗಲಾಡಿಸಬೇಕು

ಸ್ಥಾನಿಕ ಬ್ರಾಹ್ಮಣ ಸಮಾಜದ ಅಭಿವೃದ್ಧಿಗಾಗಿ ವಿವಿಧ ಸಂಘಗಳು ಕೈಗೊಳ್ಳಬೇಕಾದ ಕ್ರಮಗಳು :

ಅ)ಸ್ಥಾನಿಕ ಬ್ರಾಹ್ಮಣ ಸಮಾಜದ ಎಲ್ಲಾ ಸಂಘಗಳ ನೇತೃತ್ವ ವಹಿಸುವ ಒಕ್ಕೂಟದ ರಚನೆಯ ಕುರಿತು

ತಾತ್ಕಾಲಿಕ ಆಡಳಿತ ಮಂಡಳಿ :

ಗೌರವಾಧ್ಯಕ್ಷರು-ಶ್ರೀ ಎಮ್. ಆರ್. ವಾಸುದೇವ ರಾವ್, ಅಧ್ಯಕ್ಷರು-ಶ್ರೀ ಸಿ ಎಸ್ ರಾವ್ ಉಡುಪಿ, ಉಪಾಧ್ಯಕ್ಷರು-ಶ್ರೀ ಸುಬ್ಬಣ್ಣ ರಾವ್ ಮುಂಬಯಿ, ಶ್ರೀ ಬಾಲಚಂದ್ರ ರಾವ್ ಮುಂಬಯಿ, ಆನಂದ ರಾವ್ ಮೈಸೂರು, ಶ್ರೀ ಎಂ. ಕೆ. ಮೋಹನ್ ರಾವ್ ಪಡುಬಿದ್ರಿ, ಶ್ರೀ ಶರತ್ ರಾವ್ ಬೆಂಗಳೂರು, ಡಾ। ವೈ. ಸುದರ್ಶನ್ ರಾವ್ ಉಡುಪಿ. ಕಾರ್ಯದರ್ಶಿ-ಶ್ರೀ ಎನ್ ಕೆ ಜಗನ್ನಿವಾಸ ರಾವ್, ಕೋಶಾಧಿಕಾರಿ-ಶ್ರೀ ಉಮೇಶ್ ಶಾನುಭಾಗ್ ಕುಂದಾಪುರ, ಜೊತೆ ಕಾರ್ಯದರ್ಶಿ-ಶ್ರೀ ಕರುಣ್ ಬೆಳ್ಳೆ, ಶ್ರೀ ಪ್ರಪುಲ್ಲಚಂದ್ರ ರಾವ್,ಶ್ರೀ ದೇವಾನಂದ ಭಟ್ ಮೂಡಬಿದ್ರಿ

ಎಲ್ಲಾ ಸಂಘಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿ ಇದರ ಸದಸ್ಯರಾಗಿರುತ್ತಾರೆ

ಇದರ ಜವಾಬ್ದಾರಿ ಆದಷ್ಟು ಬೇಗನೆ ಎಲ್ಲಾ ಸದಸ್ಯರ ಸಭೆ ಕರೆದು ಆಡಳಿತ ಮಂಡಳಿಯನ್ನು ಪುನರ್ ರಚಿಸುವುದು

ಬ) ನಮ್ಮ ಸಮಾಜದ ಎಲ್ಲಾ ಜನರ ಸಮೀಕ್ಷೆ ನಡೆಸುವುದು

ಕ) ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವುದು

ಸ) ಪರಸ್ಪರ ಸಂಪರ್ಕಕ್ಕೆ ಆಧುನಿಕ ಸಂಪರ್ಕ ಮಾಧ್ಯಮಗಳ ಬಳಕೆ ಹಾಗೂ ಯುವ ಪೀಳಿಗೆಗೆ ಮಾರ್ಗದರ್ಶನ


ಗ) ಸ್ಥಾನಿಕ ಬ್ರಾಹ್ಮಣ ಕೃಷಿಕ ವೇದಿಕೆಯ ಸ್ಥಾಪನೆ ಸಂಚಾಲಕರು: ಹೊಳೆಹೂಡ್ಲು ರತ್ನಾಕರ ರಾವ


ಮ) ನಮ್ಮ ದೇವಸ್ಥಾನಗಳ ಅಭಿವೃದ್ಧಿಯಲ್ಲಿ ಕೈಜೋಡಿಸುವುದು

ನ) ಕನಿಷ್ಠ ಎರಡು ವರ್ಷಕ್ಕೊಮ್ಮೆಯಾದರೂ ಇಂತಹಾ ಸಮಾವೇಶ ನಡೆಸುವುದು (ಒಬ್ಬರ ನಂತರ ಒಬ್ಬರಾಗಿ)

ಹೀಗೆ ಈ ನಾಲ್ಕು ವಿಷಯಗಳ ಮೇಲೆ ಚರ್ಚೆನಡೆದದ್ದು ಮಾತ್ರವಲ್ಲ ಅದರ ನಿರ್ಣಯಗಳೂ ಕೂಡ ಅನುಷ್ಠಾನಕ್ಕೆ ಬಂದಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

Krishna Rao
Ph :2520652
Mob. :9902029048
KISHAN
Studio & Video





Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.




RAJESH POWER PRESS
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com
QUALITY FIRST AND ALWAYS

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

*ನೀತಿಜ್ಞಾ ನಿಯತಿಜ್ಞಾ ವೇದಜ್ಞಾ ಅಪಿ ಭವಂತಿ ಶಾಸ್ತ್ರಜ್ಞಾಃ।*
*ಬ್ರಹ್ಮಜ್ಞಾಽಪಿ ಲಭ್ಯಾಃ ಸ್ವಾಜ್ಞಾನಜ್ಞಾನಿನೋ ವಿರಲಾಃ॥*

ನೀತಿಬಲ್ಲವರು ಸಿಗುತ್ತಾರೆ. ನಿಯಮ ಅರಿತವರು ಸಿಗುತ್ತಾರೆ. ವೇದಗಳನ್ನು ತಿಳಿದವರೂ, ಶಾಸ್ತ್ರಗಳನ್ನು ಓದಿಕೊಂಡವರೂ ಬೇಕಾದಷ್ಟು ಮಂದಿ ಸಿಗುತ್ತಾರೆ. ಆದರೆ ತಮ್ಮ ಅಜ್ಞಾನವನ್ನು ತಿಳಿದುಕೊಂಡವರು ಸಿಗುವುದು ಬಹಳ ಕಷ್ಟ.

★★★★

*ಶತೇಷು ಜಾಯತೇ ಶೂರಃ ಸಹಸ್ರೇಷು ಚ ಪಂಡಿತಃ।*
*ವಕ್ತಾ ದಶಸಹಸ್ರೇಷು ದಾತಾ ಭವತಿ ವಾ ನ ವಾ॥*

ನೂರು ಮಂದಿಯಲ್ಲಿ ಒಬ್ಬ ಶೂರನಾಗಬಹುದು. ಸಾವಿರದಲ್ಲಿ ಒಬ್ಬ ಪಂಡಿತ ಸಿಗಬಹುದು. ಒಳ್ಳೆಯ ಮಾತುಗಾರ ಹತ್ತು ಸಾವಿರ ಜನರಲ್ಲಿ ಒಬ್ಬ ದೊರೆಯಬಹುದು. ಆದರೆ, ದಾನಿ ಸಿಗಬಹುದು ಅಥವಾ ಸಿಗದೆಯೂ ಇರಬಹುದು.

★★★★

*ಕಾಲಾಂತರೇ ಹ್ಯವರ್ಥಾಯ ಗೃಧ್ರೋ ಗೇಹೋಪರಿ ಸ್ಥಿತಃ।*
*ಖಲೋ ಗೃಹಸಮೀಪಸ್ಥಃ ಸದ್ಯೋಽನರ್ಥಾಯ ದೇಹಿನಾಮ್॥*

ಮನೆಯ ಮೇಲೆ ಹದ್ದು ಕುಳಿತರೆ ಭವಿಷ್ಯದಲ್ಲಿ ಕೆಡುಕಾಗಬಹುದೇನೋ. ಆದರೆ ದುಷ್ಟನಾದವನು ಮನೆಯ ಹತ್ತಿರವಿದ್ದರೂ ಸಾಕು ಶೀಘ್ರದಲ್ಲೇ ಅನರ್ಥ ಸಂಭವಿಸುತ್ತದೆ.

*ಸಂಗ್ರಹ : ಎಚ್.ಎನ್.ಶ್ಯಾನುಭಾಗ್*

# ಶ್ರೀ ಕೃಷ್ಣಾಯನ
## (ಶ್ರೀ ಮದ್ಭಾಗವತಾನುಸಾರಿ)



– ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಸಾಂಬನು ರಥವಿಲ್ಲದೆ ನಿಂತಿದ್ದಾಗ ಅವನನ್ನು ಕಟ್ಟಿ ಹಸ್ತಿಪುರಕ್ಕೆ ಎಳೆದುಕೊಂಡು ಹೋಗಿ ಬಂಧನದಲ್ಲಿಟ್ಟರು. ಈ ಸುದ್ದಿಯನ್ನು ನಾರದರು ಶ್ರೀಕೃಷ್ಣನಿಗೆ ತಿಳಿಸಿದರು. ಉಗ್ರಸೇನನ ಆಜ್ಞೆಯಂತೆ ಶ್ರೀಕೃಷ್ಣನನೇ ಮೊದಲಾದ ಯಾದವರು ಯುದ್ಧಕ್ಕಾಗಿ ಸೈನ್ಯವನ್ನು ಸಜ್ಜುಗೊಳಿಸಿದರು. ಆಗ ಬಲರಾಮನು ಅದನ್ನು ಸಮ್ಮತಿಸಲಿಲ್ಲ. ಯಾದವರಿಗೂ, ಕೌರವರಿಗೂ ಯುದ್ಧ ಸಲ್ಲದೆಂದನು. ಅವನು ರಥವನ್ನೇರಿ ಬ್ರಾಹ್ಮಣರನ್ನು, ಕುಲವೃದ್ಧರನ್ನೂ ಕರೆದುಕೊಂಡು ಹಸ್ತಿನಾಪುರಕ್ಕೆ ಹೋದನು. ಅಲ್ಲಿ ಉಪವನದಲ್ಲಿ ಬೀಡುಬಿಟ್ಟು ಉದ್ಧವನನ್ನು ಧೃತರಾಷ್ಟ್ರನ ಆಸ್ಥಾನಕ್ಕೆ ಕಳಹಿಸಿ ಕೊಟ್ಟನು. ಉದ್ಧವನು ಧೃತರಾಷ್ಟ್ರ, ಭೀಷ್ಮಾದಿಗಳಿಗೆ ಬಲರಾಮನ ಆಗಮನವನ್ನು ಅರುಹಿದನು. ಈ ವಿಷಯವನ್ನು ತಿಳಿದ ಕೌರವರು ಆನಂದ ನಿರ್ಭರರಾದರು. ದುರ್ಯೋಧನಾದಿಗಳು ಮಂಗಳ ದ್ರವ್ಯಗಳ ಸಹಿತ ಬಲದೇವನನ್ನು ಎದುರುಗೊಳ್ಳಲು ಉಪವನಕ್ಕೆ ಬಂದರು. ಅಲ್ಲಿ ಸಂಕರ್ಷಣನನ್ನು ಯಥೋಚಿತವಾಗಿ ಸತ್ಕರಿಸಿದರು. ಅನಂತರ ಪರಸ್ಪರ ಕುಶಲಪ್ರಶ್ನೆಗಳಾದವು. ಕೊನೆಗೆ ಬಲರಾಮನು ಸ್ಪಷ್ಟವಾದ ಮಾತುಗಳಿಂದ ಹೇಳಿದನು, "ನೀವು ಅನೇಕರು ಸೇರಿ ಅಧರ್ಮದಿಂದ ಧಾರ್ಮಿಕನಾದ ನಮ್ಮ ಸಾಂಬನನ್ನು ಬಂಧಿಸಿರುವಿರಿ. ಬಂಧುಗಳೊಳಗೆ ಐಕ್ಯವಿರಬೇಕೆಂಬ ಕಾರಣಕ್ಕಾಗಿ ಇದನ್ನು ನಾವು ಸಹಿಸಿಕೊಂಡಿದ್ದೇವೆ. ಬಲಪ್ರಯೋಗಕ್ಕೆ ಅವಕಾಶ ಕೊಡದೆ ಸಾಂಬನನ್ನು ಅವನ ವಧುವಿನ ಸಹಿತ ನಮ್ಮಲ್ಲಿಗೆ ಕಳುಹಿಸಿ ಕೊಡಿರಿ–ಕೌರವರೆ, ಇದು ನಮ್ಮ ಮಹಾರಾಜನಾದ ಉಗ್ರಸೇನನ ಆಜ್ಞೆ." ಬಲರಾಮನ ಈ ಮಾತುಗಳನ್ನು ಕೇಳಿ ಕೌರವರು ರೋಷಾವಿಷ್ಟರಾದರು. ಅವರೆಂದರು, "ನಿಜವಾಗಿಯೂ ಈ ಕಾಲಗತಿ ಬಹಳ ವಿಚಿತ್ರವಾದುದು. ಕಾಲನಲ್ಲಿರಬೇಕಾದ ಪಾದರಕ್ಷೆಯನ್ನು ಕಿರೀಟ ಮಾಡಿ ತಲೆಯ ಮೇಲೆ ಇಟ್ಟುಕೊಂಡಂತಾಯಿತು. ಈ ವೃಷ್ಣಿಗಳು ನಾವು ಕೊಟ್ಟ ಆಸನ, ಚಾಮರ, ವ್ಯಜನ, ಶಂಖ, ಬೆಳ್ಗೊಡೆ, ಕಿರೀಟ, ಶಯ್ಯೆಗಳಿಂದಾಗಿ ನಮಗೆ ಸಮಾನರಾಗಿದ್ದಾರೆ. ನಾವು ತೋರಿದ ಅಸಡ್ಡೆಯ ಪರಿಣಾಮವಿದು. ನಾವೇ ದಯಪಾಲಿಸಿದ ರಾಜಚಿಹ್ನೆಗಳನ್ನಿಟ್ಟುಕೊಂಡು ನಮ್ಮ ಮೇಲೆ ಪ್ರಭುತ್ವ ಮಾಡಲು ಬರುತ್ತಿದ್ದಾರೆ. ಈ ಲಜ್ಜೆಗೆಟ್ಟವರು ನಮಗೇ ಆಜ್ಞೆ ಕೊಡುವಷ್ಟು ಬೆಳೆದುಬಿಟ್ಟರಲ್ಲಾ! ಅಬ್ಬಾ ಕಾಲದ ವೈಪರೀತ್ಯವೇ!" ಈ ರೀತಿ ತಮ್ಮ ಕುಲ, ಬಂಧು, ಸಂಪತ್ತುಗಳ ಮದದಿಂದ ಉದ್ಧತರಾದ ಕೌರವರು ಕನಿಷ್ಠ ಸೌಜನ್ಯವನ್ನೂ ತೋರಿಸದೆ ಹಸ್ತಿನಾಪುರಕ್ಕೆ ಹಿಂತಿರುಗಿ ಹೋದರು. "ದುಷ್ಟರು ಕುಲ, ಧನ, ವೀರ್ಯಗಳ ಮದದಿಂದ ಕುರುಡರಾಗುತ್ತಾರೆ. ಆದುದರಿಂದಲೇ ನಮ್ಮ ಪ್ರಭಾವವನ್ನು ಪರಿಗಣಿಸದ ಕೌರವರು ಅಸಭ್ಯವಾಗಿ ವರ್ತಿಸಿದ್ದಾರೆ. ಶ್ರೀಕೃಷ್ಣನ ಮಹಿಮೆಯನ್ನಾಗಲೀ, ನನ್ನ ಸಾಮರ್ಥ್ಯವನ್ನಾಗಲೀ ಈ ಮೂರ್ಖರು ಅರಿಯರು. ಯುದ್ಧಕ್ಕೆ ಸಿದ್ಧರಾಗಿದ್ದ ಶ್ರೀಕೃಷ್ಣಾದಿಗಳನ್ನು ತಡೆದದ್ದು ನನ್ನದೇ ತಪ್ಪು. ಈಗ ಅವರಿಗೆ ಪಾಠ ಕಲಿಸಬೇಕಾಗಿದೆ. ಪಾಠವೇನು ಕಲಿಸುವುದು? ಭೂಮಿಯ ಮೇಲೆ ಕೌರವರ ಒಂದು ಪಿಳ್ಳೆಯೂ ಇಲ್ಲದಂತೆ ಮಾಡಿಬಿಡುತ್ತೇನೆ" ಎಂದು ಕ್ರೋಧ ಪರವಶನಾದ ಬಲದೇವನು ತನ್ನ ಹಲಾಯುಧವನ್ನು ಹಸ್ತಿನಾಪುರದ ಭೂಮಿಗೆ ಆಳವಾಗಿ ಊರಿ ಗಂಗೆಯ ಕಡೆಗೆ ಸೆಳೆಯಲಾರಂಭಿಸದನು. ಇಡಿ ಹಸ್ತಿನಾಪುರವನ್ನೇ ಗಂಗೆಯಲ್ಲಿ ಮುಳುಗಿಸಿ ಬಿಡುವ ಪ್ರಯತ್ನ ಅವನದು. ಹಸ್ತಿನಾಪುರ ಗಂಗೆಯ ಕಡೆಗೆ ನಡುಗುತ್ತ ವಾಲುತ್ತಿದ್ದಂತೆ ಕೌರವರು ಗಾಬರಿಯಾದರು. ಎಲ್ಲ ಕಡೆ ಕೋಲಾಹಲವೆದ್ದಿತು. ಭೂಕಂಪವೋ, ಪ್ರಳಯವೋ ಎಂದು ತಿಳಿಯದಾಯಿತು. ಕೊನೆಗೆ ಅದು ಬಲರಾಮನ ಕೃತ್ಯವೆಂಬುದು ತಿಳಿದು ಬಂತು. ಕೂಡಲೆ ಕೌರವರು ಓಡಿ ಬಂದು ಬಲಭದ್ರನ ಕಾಲು ಹಿಡಿದುಕೊಂಡರು. "ಭಗವಂತ, ನಿನ್ನ ಪ್ರಭಾವ ನಮಗೆ ತಿಳಿಯದ್ದೇನಲ್ಲ. ನೀನು ಸರ್ವಶಕ್ತ. ಹಾಗೇ ದಯಾಸಿಂಧುವಲ್ಲವೇ? ನಮ್ಮ ಮೂರ್ಖತನವನ್ನು ಕ್ಷಮಿಸಿಬಿಡು. ನಾವು ನಿನಗೆ ಶರಣಾಗಿದ್ದೇವೆ." ಎಂದು ದೈನ್ಯದಿಂದ ಪ್ರಾರ್ಥಿಸಿಕೊಂಡರು. ಆಗ ಬಲರಾಮನು ಪ್ರಸನ್ನನಾಗಿ, "ಹೆದರದಿರಿ" ಎಂದು ಆಶ್ವಾಸನೆಯನ್ನಿತ್ತನು. ದುರ್ಯೋಧನನು ತನ್ನ ಮಗಳನ್ನೂ, ಸಾಂಬನನ್ನೂ ಪ್ರೀತ್ಯಾದರಗಳಿಂದ ರಥದ ಮೇಲೆ ಕುಳ್ಳಿರಿಸಿ ಬಲರಾಮನ ಮುಂದೆ ಕರೆತಂದನು. ಹಾಗೇ ಅನೇಕಾನೇಕ ಗಜ, ತುರಗ, ಸ್ವರ್ಣರಥ, ದಾಸಿಯರನ್ನೂ ಉಡುಗೊರೆಯಾಗಿ ಒಪ್ಪಿಸಿದನು. ಸಂಕರ್ಷಣನು ಹರ್ಷಚಿತ್ತನಾಗಿ ಲಕ್ಷ್ಮಣೆ, ಸಾಂಬ, ಬಳುವಳಿಗಳೊಂದಿಗೆ ದ್ವಾರಕೆಗೆ ಹೊರಟು ಬಂದನು. ಹಸ್ತಿನಾಪುರದಲ್ಲಿ ನಡೆದ ಘಟನೆಗಳನ್ನು ವಿವರಿಸಿ ಹೇಳಿದನು,

ಇಂದಿಗೂ ಬಲರಾಮನ ಹಲದಿಂದ ಎತ್ತಿದ ಹಸ್ತಿನಾವತಿಯ ದಕ್ಷಿಣ ಭಾಗವು ಎತ್ತರವಾಗಿದ್ದು ಅವನ ವಿಕ್ರಮಕ್ಕೆ ಸಾಕ್ಷಿಯಾಗಿದೆ.

### ೨೨

ಶ್ರೀಕೃಷ್ಣನಿಗೆ ಹದಿನಾರು ಸಾವಿರದ ನೂರ ಎಂಟು ಪತ್ನಿಯರಿರುವುದರಿಂದ ಅವನು ಗೃಹಸ್ಥ ಧರ್ಮವನ್ನು ಹೇಗೆ ಪಾಲಿಸುತ್ತಾನೆಂಬುದನ್ನು ನೋಡುವ ಕುತೂಹಲ ನಾರದರಿಗೆ ಉಂಟಾಯಿತು. ಅವರು ಮೊದಲು ರುಕ್ಮಿಣಿಯ ಅಂತಃಪುರಕ್ಕೆ ಹೋದರು. ಅಲ್ಲಿ ಶ್ರೀಕೃಷ್ಣನು ಪರ್ಯಂಕದಲ್ಲಿ ಕುಳಿತಿದ್ದನು. ರುಕ್ಮಿಣಿಯು ಅವನಿಗೆ ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದಳು. ದೇವರ್ಷಿಗಳನ್ನು ನೋಡುತ್ತಲೇ ಅವನು ಮಂಚದಿಂದಿಳಿದು ಅವರನ್ನು ಆಸನದಲ್ಲಿ ಕುಳ್ಳಿರಿಸಿ ಪಾದ್ಯಾದಿಗಳಿಂದ ಉಪಚರಿಸಿದನು. ಅಲ್ಲಿಂದ ಅವರು ಸತ್ಯಭಾಮೆಯ ಬಳಿಕ ಇತರ ಎಲ್ಲ ರಾಣಿಯರ ಅಂತಃಪುರಗಳಿಗೆ ಭೇಟಿಕೊಟ್ಟರು. ಎಲ್ಲ ಕಡೆಯೂ ಭಗವಂತನು ಒಂದಲ್ಲ ಒಂದು ಕೆಲಸ ಮಾಡುತ್ತಿದ್ದು ಅವರನ್ನು ಮೊದಲನೆಯ ಸಲವೋ ಎಂಬಂತೆ ಸತ್ಕರಿಸುತ್ತಿದ್ದನು.ಒಂದು ಕಡೆ ಯಜ್ಞ ಮಾಡುತ್ತಿದ್ದನು. ಇನ್ನೊಂದು ಕಡೆ ಬ್ರಾಹ್ಮಣರಿಗೆ ಊಟ ಮಾಡಿಸುತ್ತಿದ್ದನು. ಮತ್ತೊಂದು ಕಡೆ ಸಂಧ್ಯಾವಂದನೆ ಮಾಡುತ್ತಿದ್ದರೆ ಮಗದೊಂದು ಕಡೆ ಜಪ ನಿರತನಾಗಿದ್ದನು. ಒಂದು ಕುದುರೆಗಳ ಮೇಲೆ, ಮತ್ತೊಂದು ಕಡೆ ಆನೆಗಳ ಮೇಲೆ ಕುಳಿತು ವಿಹರಿಸುತ್ತಿದ್ದನು. ಇದನ್ನೆಲ್ಲ ನೋಡಿದ ನಾರದರು ಭಗವಂತನ ಯೋಗಮಾಯೆಯ ಮಹಿಮೆಗೆ ತಲೆಬಾಗಿದರು. ಹಾಗೇ ದೇವಾಧಿದೇವನ ಅಚಿಂತ್ಯ ಮಹಾತ್ಮವನ್ನು ಬೆರಗುಪಟ್ಟು ನೋಡಿ ಅವನನ್ನು ವಿಧವಿಧವಾಗಿ ಸ್ತುತಿಸಿದರು. ಅವನ ಮೇಲೆ ಸದಾ ಅನನ್ಯ ಭಕ್ತಿಯಿರುವಂತೆ ಅನುಗ್ರಹಿಸಲು ಪ್ರಾರ್ಥಿಸಿದರು. ಶ್ರೀಕೃಷ್ಣನು ಹಾಗೇ ಅನುಗ್ರಹಿಸಿ ಅವರನ್ನು ಬೀಳ್ಕೊಟ್ಟನು.

★★★★ ★★★★

ಶ್ರೀಕೃಷ್ಣ ಪರಮಾತ್ಮನ ನಿತ್ಯಜೀವನದ ಪರಿಯನ್ನು ನೋಡಬೇಕು. ಅವನು ಬೆಳಿಗ್ಗೆ ಬ್ರಾಹ್ಮಮುಹೂರ್ತದಲ್ಲಿ ಏಳುತ್ತಿದ್ದನು. ಎದ್ದು ಮುಖಮಾರ್ಜನಾದಿಗಳನ್ನು ಮುಗಿಸಿ ತಮೋಗುಣಾತೀತವಾದ ಆತ್ಮವನ್ನು ಧ್ಯಾನಿಸುತ್ತಿದ್ದನು.

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**

**"ಯಕ್ಷಗುಚ್ಛ"** *(ಮೂರು ಯಕ್ಷಗಾನ ಪ್ರಸಂಗಗಳು)*
*ಲೇಖಕರು :* ಎರ್ಮಾಳು ವಾಸುದೇವ ರಾವ್
*ಪ್ರಕಾಶಕರು:* ಜಯಲಕ್ಷ್ಮಿ ಪ್ರಕಾಶನ, ಎರ್ಮಾಳು.

"ಯಕ್ಷಗುಚ್ಛ" ಈ ಕೃತಿಯಲ್ಲಿ ಲೇಖಕರು ಎರ್ಮಾಳು ವಾಸುದೇವ ರಾವ್ ತಿಳಿಸಿದಂತೆ "ಈ ಪುಸ್ತಕದಲ್ಲಿ ಬರುವ ಮೊದಲ ಪ್ರಸಂಗವು (ಶ್ರೀ ಸತ್ಯನಾರಾಯಣ) ಈಗ ಎಲ್ಲಾ ಕಡೆಗಳಲ್ಲಿ ಆಚರಿಸುವ ಶ್ರೀ ಸತ್ಯನಾರಾಯಣ ವ್ರತದ ಪೂಜೆಯ ಕಥೆಯೆ ಆಗಿದೆ. ಪ್ರಾರಂಭದ ಸೂತ ಪೌರಾಣಿಕರ ಬದಲು ಶ್ರೀ ಮಹಾವಿಷ್ಣು ಮತ್ತು ನಾರದರ ಪಾತ್ರವನ್ನು ತೆಗೆದುಕೊಂಡಿದ್ದೇನೆ. ಇದರಿಂದ ಕಥೆಗೇನು ಲೋಪವಾಗಲಿಕ್ಕಿಲ್ಲವೆಂದು ನನ್ನ ಭಾವನೆ. ಯಕ್ಷಗಾನ ಪ್ರಸಂಗಗಳಲ್ಲಿ ನವರಸಗಳಿದ್ದರೂ ವೀರರಸ ಪ್ರಧಾನವಾಗಿದ್ದರೆ ಅದಕ್ಕೊಂದು ಕಳೆಕಟ್ಟುತ್ತದೆ. ಅದಕ್ಕಾಗಿ ಮೂಲ ಕಥೆಯಲ್ಲಿ ಬರುವ ಕಳ್ಳನ ಕಥೆ, ಸಾಧುವನ್ನು ಕಳ್ಳರು ದೋಚುವುದು ಮತ್ತು ಮಹಾರಾಜನ ಬೇಟೆಯನ್ನು ಯಕ್ಷಗಾನಕ್ಕೆ ಹೊಂದುವಂತೆ ವಿವರವಾಗಿ ತೆಗೆದುಕೊಂಡಿದ್ದೇನೆ. ಹಾಗೆಯೇ ಕಥೆಯಲ್ಲಿ ಹಿಂದುಮುಂದು ಮಾಡಿಕೊಂಡು ಹೊಂದಿಸಿಕೊಂಡಿದ್ದೇನೆ....

ಎರಡನೇಯ ಪ್ರಸಂಗವನ್ನು (ನಾಲ್ವರ ಗರ್ವಭಂಗ) ಭಾರತದಲ್ಲಿ ಮತ್ತು ಭಾಗವತದಲ್ಲಿ ಬರುವ ವಿಚಾರವನ್ನೆ ಆಧರಿಸಿ, ನನ್ನದೇ ಕಲ್ಪನೆಯನ್ನು ಅನುಸರಿಸಿ ಬರೆದಿದ್ದೇನೆ.

ಮೂರನೆಯ ಪ್ರಸಂಗವು (ದೂರ್ವಾಗಣಪತಿ) ಗಣೇಶ ಪುರಾಣದಲ್ಲಿ ಬರುವ ಒಂದು ಕಥೆಯನ್ನು ಆಧರಿಸಿ ರಚನೆಯಾಗಿದೆ"

ಈ ಕೃತಿಯ ಪ್ರಕಾಶಕರು ಹೀಗೆ ತಿಳಿಸುತ್ತಾರೆ- "ನಮ್ಮ ತಂದೆಯವರು ವೃತ್ತಿಯಲ್ಲಿ ಅಧ್ಯಾಪಕನಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿ 25 ವರುಷ ಸಂದರೂ ಈಗಲೂ ಅವರು ತಮ್ಮ ತೆಂಕುತಿಟ್ಟಿನ ಯಕ್ಷಗಾನದ ಕಲೆಯನ್ನು ಪಸರಿಸುತ್ತಲೇ ಇದ್ದಾರೆ. ತೆಂಕುತಿಟ್ಟಿನ ಯಕ್ಷಗಾನದ ಗುರುಗಳಾಗಿ (ಭಾಗವತಿಕೆ, ಮದ್ದಳೆ, ಚೆಂಡೆ ಹಾಗೂ ನಾಟ್ಯ), ಬಡಗುತಿಟ್ಟು ಯಕ್ಷಗಾನದ ಮದ್ದಳೆವಾದಕರಾಗಿ, ಹರಿಕಥೆ, ಭಜನೆ ಮತ್ತು ನಾಟಕಗಳಿಗೆ ತಬಲವಾದಕರಾಗಿ, ಯಕ್ಷಗಾನ ಮತ್ತು ನಾಟಕಗಳಲ್ಲಿ ವರ್ಣಾಲಂಕಾರ, ರಾಮಾಯಣ, ಮಹಾಭಾರತ, ಜೈಮಿನಿ ಭಾರತದ ವಾಚನಗಳಲ್ಲಿ ವಾಚಕರಾಗಿ ಹೀಗೆ ಹತ್ತು ಹಲವು ವಿದ್ಯೆಗಳಲ್ಲಿ ನೈಪುಣ್ಯತೆಯನ್ನು ಪಡೆದು ಇಂದಿನ ಯುವಜನತೆಗೆ ಕಲಿಸಿ ಕಲಾಸೇವೆಯಲ್ಲಿ ಮುಂದೆ ಬರುವಂತೆ ಪ್ರೋತ್ಸಾಹಿಸುತ್ತಿದ್ದಾರೆ.

ಇವರು ಪ್ರಚಾರ ಪ್ರಿಯರಲ್ಲ, ಮಿತಭಾಷಿ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಈಗಲೂ ಸಹ ಹಲವಾರು ಸಂಘ ಸಂಸ್ಥೆಗಳಲ್ಲಿ ಯಕ್ಷಗಾನದ ತರಬೇತಿ ಶಿಬಿರಗಳನ್ನು ನಡೆಸುತ್ತಿದ್ದಾರೆ. ಎಲೆಮರೆಯ ಕಾಯಿಯಂತೆ ಕಲಾಸೇವೆಯನ್ನು ಮಾಡುವ ಇವರು ಹಲವಾರು ಸಂಘ ಸಂಸ್ಥೆಗಳಿಂದ ಸಂಮಾನಿತರಾಗಿದ್ದಾರೆ".

ಈ ಕೃತಿಯಲ್ಲಿ (ಶ್ರೀ ಸತ್ಯನಾರಾಯಣ) ಮಂಗಳ ಪದ್ಯ ಹೀಗಿದೆ.

ರಾಗಮಧ್ಯಮಾವತಿ-ಏಕತಾಳ

ಪರಮ ಸತ್ಯವನು ಸಾರಿದಗೆ।
ಸರುವ ಲೋಕವ ಪಾಲಿಪಗೆ॥
ಕರುಣದಿ ಭಕ್ತರ ಸಾಧುಸಜ್ಜನರ
ಪೊರೆವ ಸತ್ಯ ನಾರಾಯಣಗೆ॥ ಮಂಗಳಂ॥

ಎರ್ಮಾಳು ವಾಸುದೇವರಾವ್ ಇವರ 'ಯಕ್ಷಗುಚ್ಛ' ಯಕ್ಷಗಾನ ಸಾಹಿತ್ಯ ಪ್ರಪಂಚಕ್ಕೆ ಒಂದು ಮಹತ್ತರ ಕೊಡುಗೆಯಾಗಿದೆ. ಹತ್ತಾರು ಕ್ಷೇತ್ರಗಳಲ್ಲಿ ದುಡಿದ ಇವರ ಪರಮ ಅನುಭವಗಳು ಮೂರು ಯಕ್ಷಗಾನ ಪ್ರಸಂಗಗಳಾಗಿ ಸಾಕಾರವಾಗಿವೆ ಎನ್ನಬಹುದು.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ.

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ| ಪ್ರೊ| ಗುರುರಾಜ ಭಟ್ಟರ ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

**3) ದಿಕ್ಕುಗಳನ್ನು ಹೊಂದಿಕೊಂಡು :**

ನಡು + ಇಲ್ಲಾಯ – ನೆಡ್ಡಿಲ್ಲಾಯ (ನಡುಮನೆಯವನು)

ತೆಂಕು + ಇಲ್ಲಾಯ – ತೆಂಕಿಲ್ಲಾಯ (ತೆಂಕುಮನೆಯವನು)

ನಡುವಂತಿಲ್ಲಾಯ – ನಡುಮನೆಯಲ್ಲಿ ವಾಸಿಸುವವನು

ಪಡು + ಇಲ್ಲಾಯ – ಪಡ್ಡಿಲ್ಲಾಯ (ಪಡುಮನೆಯವನು)

ಮಿತ್ತ+ ಇಲ್ಲಾಯ – ಮಿತ್ತಿಲ್ಲಾಯ (ಮೇಲಿನ ಮನೆಯವನು)

ಬಡಗು+ಇಲ್ಲಾಯ-ಬಡಕಿಲ್ಲಾಯ

**4) ಸ್ಥಳದ ಲಕ್ಷಣವನ್ನು ಹೊಂದಿಕೊಂಡು :** ಕೋಡಿ, ಕುದುರು, ಮಾರ್ಗ, ಬೆಟ್ಟ-ಇತ್ಯಾದಿ ಸ್ಥಳಗಳ ಹತ್ತಿರ ವಾಸಿಸುವವರು ಎಂಬ ಅರ್ಥದಲ್ಲಿ ಬಂದಿರುವ ಕುಲನಾಮಗಳು ಕೋಡಿನಾಯ, ಕುಂಜತ್ತಾಯ, ಕೊಳತ್ತಾಯ, ಪಾದೆತ್ತಾಯ, ತೋಟತಿಲ್ಲಂತಾಯ, ದುರ್ಗತ್ತಾಯ, ಗುಡ್ಡೆತ್ತಾಯ, ಕುಂಡತಾಯ, ಪಾಡಿತಾಯ, ತೋಡಿಲ್ಲಾಯ, ತೋಡಿನಾಯ, ಕುದುರಾಯ, ಮಾರ್ಗಂತಾಯ, ಬೆಟ್ಟನಾಯ ಇತ್ಯಾದಿ.

**5) ಮೃಗ ವೃಕ್ಷಗಳನ್ನು ಹೊಂದಿಕೊಂಡು :** ಪಿಲ (ಹಲಸು), ಪಿಜ (ಹೆಬ್ಬಲಸು), ಕಂಗು (ಅಡಿಕೆ ಮರ), ಪೇರಳೆ, ಗೋಳಿ, ನೆಲ್ಲಿ, ನೆಕ್ಕರೆ, ತಾಳಿ, ಬೋರಿ (ಬಸವ), ಕುದುರೆ, ಆನೆ, ಉರೇ (ಜಿಂಕೆ) ಇತ್ಯಾದಿಗಳನ್ನು ಸಂಕೇತವಾಗಿರಿಸಿಕೊಂಡವರೆಂಬ ಅರ್ಥದಿಂದಲೋ ಅಥವಾ ಅವುಗಳ ಹತ್ತಿರ ವಾಸಿಸುತ್ತಿದ್ದವರೆಂಬ ಅರ್ಥದಿಂದಲೋ ಅಥವಾ ಅವುಗಳನ್ನು ವಿಶೇಷವಾಗಿ ಪೋಷಿಸುತ್ತಿದ್ದರೆಂಬ ಅರ್ಥದಿಂದಲೋ ಬಂದ ಕುಲನಾಮಗಳು, ಪಿಲತ್ತಾಯ, ಪಿಜಯತ್ತಾಯ, ಕಂಗಿತಾಯ, ಪೇರಳಾಯ, ಗೋಳಿನಾಯ, ನೆಲ್ಲಿತಾಯ, ನೆಕ್ಕರೆಂತಾಯ, ತಾಳಿತಾಯ, ಬೋರಿತ್ತಾಯ, ಕುದುರೆತ್ತಾಯ, ಉರತ್ತಾಯ, ಆನೆ ಇತ್ಯಾದಿ.

**6) ವಸ್ತುಗಳ ಹೆಸರುಗಳನ್ನು ಹೊಂದಿಕೊಂಡು :** ಮನೋಳಿ, ದೋಣಿ, ಸುಣ್ಣ ಕಲೆಂಬಿ, ಉಳಿ, ಖಡ್ಗ, ಪುಳಿನ (ಮರಳು), ಮಂಜಿ, ಗಂಗೆ, ಅರೀ (ಅಕ್ಕಿ), ಉಬ್ಬಳಿ, ಮಜಿ, ಅಪ್ಪಟೆ, ಇತ್ಯಾದಿಗಳನ್ನು ಸಂಕೇತವಾಗಿರಿಸಿಕೊಂಡುದರಿಂದಲೋ ಅವುಗಳನ್ನು ವ್ಯಾಪಾರದಲ್ಲಿ ಉಪಯೋಗಿಸುವುದರಿಂದಲೋ, ಇತರ ಯಾವ ಕಾರಣದಿಂದಲೋ ಬಳಕೆಗೆ ಬಂದ ಕುಲಗಳ ಹೆಸರುಗಳು ಮನೋಳಿತ್ತಾಯ, ದೋಣಿ, ಸುಣ್ಣಂತ್ತಾಯ, ಕಲಂಬಿತ್ತಾಯ, ಉಳಿತ್ತಾಯ, ಖಡ್ಗತ್ತಾಯ, ಪೊಳಿನಾಯ, ಮಂಜಿತ್ತಾಯ, ಗಂಗೆತ್ತಾಯ, ಅರಿತ್ತಾಯ, ಉಬ್ಬಳಿತ್ತಾಯ, ಮಜಿತ್ತಾಯ ಅಪ್ಪಟೆ ಇತ್ಯಾದಿ.

**7) ಬರೆ ಊರ ಹೆಸರುಗಳಿಂದ :** ಉಜಿರೆ, ಸೂರ್ಯ (ಸುರಿಯ), ಮುಕ್ಕ ಅಕ್ಕೋಡಿ, ಕಲ್ಲಾಡಿ (ಕಲ್ಲಾಳಿ ?) ಕೊಳಂಬೆ, ಬೆಪಾಡಿ ಇತ್ಯಾದಿ.

**8) ಇತರ ರೀತಿಗಳಿಂದ ಬಂದ ಹೆಸರುಗಳು :** ಮೇಲಿನ ರೀತಿಯ ವರ್ಗೀಕರಣಕ್ಕೆ (ಎಂದರೆ ಅರ್ಥವಿಸಲು ಕಷ್ಟವಾದ ಸಿಕ್ಕದ ಕುಲನಾಮಗಳು ಅನೇಕ ಇವೆ. ಹೇಗೆ ಆ ಹೆಸರುಗಳು ಬಂದುವೆಂದು ನಿರ್ಧರಿಸುವುದು ಕಷ್ಟ, ಊಹನೆ ಮಾಡಬಹುದಷ್ಟೆ. ಈ ಊಹನೆಯನ್ನು ನಾನು ಬರೇ ಹಾಸ್ಯಕ್ಕೋಸ್ಕರ ಕೊಡಲು ಹೊರಟಿಲ್ಲ, ವಿಚಾರ ಮಾಡಬೇಕು. ಶಿವನಿಗೆ ಪೂಜೆ ಮಾಡುವವನು ಶಿವತ್ತಾಯನಾಗಿರಬಹುದು. ತುಂಬಾ ಮಡಿ ಇದ್ದವನು ಮಡಿನಾಯನಾಗಿರಬಹುದು.

ಮೂಲದಲ್ಲಿ ಒಂದು ಕಣ್ಣುಳ್ಳವನ ಕುಲವು ಒಕ್ಕಣ್ಣಾಯನ ಕುಲವಿರಬಹುದು. ಮೊಗೆರಾಯನು ಮೊಗೇರರೊಡನೆ ವ್ಯವಹರಿಸುತ್ತಿದ್ದವನಿರಬಹುದು. ನಾಣಿ ನಾಯನೆಂಬವನು 'ನಾಣಿಲ್' ಮರದಡಿಯಲ್ಲಿ ವಾಸಿಸುತ್ತಿರಬಹುದು. ಅಥವಾ 'ನಿತಂಬ' (ನಾಣಿನ್)ದಿಂದ ಬಂದ ಹೆಸರಿರಬಹುದು. ನೂಜಿತ್ತಾಯ ನೂಜಾಡಿಯ ನಿವಾಸಿಯಲ್ಲಿರಬಹುದು. ಅಂತೆಯೇ ಬರೇ 'ನೂಜಿ' ಎಂಬ ಕುಲದ ಹೆಸರೂ ಇದೆ. ಬಾಯರಿತ್ತಾಯವೆಂಬುದು 'ಬಾಯರಿ' ಎಂಬ ಕುಲನಾಮಕ್ಕೆ 'ತಾಯ' ಪ್ರತ್ಯಯ ಸೇರಿದುದರಿಂದ ಉಂಟಾದುದು. ಸರಳ ಸ್ವಭಾವದವರು ಸರಳಾಯರಾದರೋ ಏನೋ? ಪುತ್ತೂರಿನಲ್ಲಿ ವಾಸಿಸುತ್ತಿದ್ದವರು ಪುತ್ತೂರಾಯರಾಗಿದ್ದು, ಅದು ಕ್ರಮೇಣ ಪುತ್ತಾಯರೆಂಬ ರೂಪವನ್ನು ತಾಳಿತೋ ಏನೋ (ಸಹ್ಯಾದ್ರಿಯಲ್ಲಿ ಇವರ ವೈಶಿಷ್ಟವನ್ನು ಬೇರೆ ರೀತಿ ಹೇಳಿದೆ). ''ಮಂದೆಯನ್ನಿಟ್ಟು ಕೊಂಡವರು ಮಂದಿತ್ತಾಯರಾಗಿರಬಹುದು. ಕೊಡುವ ಧಾರಳ ಹೃದಯವುಳ್ಳವರು ಕೊರ್ನಾಯರಿರಬೇಕು. ಅಥವಾ 'ಕೊರನ್' ಎಂಬ ಒಂದು ಜಾತಿಯ ಮೀನಿನಿಂದ ಬಂದಿರುವ ಹೆಸರಾಗಿರಬಹುದು. ಅಂತೆಯೇ 'ಕಲ' ನಾಯನು 'ಕಲ'ದಲ್ಲಿವಾಸಿಸುತ್ತಿದ್ದವನೋ ಏನೋ? ಅಥವಾ ಕುಲದಲ್ಲಿ ಕೆಳವರ್ಗದವನೆಂಬುದನ್ನು ಸೂಚಿಸುವ ಹೆಸರಿರಬಹುದು. (ಕಲ-A Square, 2. A bed of flowers etc. 3. A place where pariahs assemble)

**(ಮುಂದಿನ ಸಂಚಿಕೆಯಲ್ಲಿ ಕೊನೆಯ ಕಂತು)**

**'ತುಳುನಾಡು' ಕೃತಿಯ ಲೇಖಕರು ಪ್ರೊ| ಗುರುರಾಜ ಭಟ್ಟರ ಬಗ್ಗೆ :**




ದಿ| ಪ್ರೊ| ಗುರುರಾಜ ಭಟ್ಟ

ಡಾ| ಪಾದೂರು ಗುರುರಾಜ ಭಟ್ಟ ಇವರ ಪ್ರಮುಖ ಗ್ರಂಥ 'Studies in Tuluva History & Culture'. ಇವರ ಇನ್ನೊಂದು ಪ್ರಮುಖ ಕೃತಿ 'ತುಳುನಾಡು'. ಈ ಕೃತಿಯಲ್ಲಿ ಅವರು ಮುನ್ನುಡಿಯಲ್ಲಿ ತಿಳಿಸಿದಂತೆ-''ನಾನು ಸಂಶೋಧನಾ ಕಾರ್ಯವನ್ನು ಎರಡು ಮೂರು ವರ್ಷಗಳ ಹಿಂದಕ್ಕೆ ಪ್ರಾರಂಭಿಸಿದಾಗ ಈ ಸ್ಥಾನಿಕ ವರ್ಗದ ವಿಷಯ ಹೆಚ್ಚು ತಿಳಿಯಬೇಕೆಂಬ ಅಶಾಂಕುರವು ಮೂಡಿತು. ತುಳುನಾಡಿನ ಸಮಾಜವನ್ನು ಪದರು ಪದರಾಗಿ ಅವಲೋಕಿಸುವಾಗ, ನಾನು ಕಂಡಂತೆ, ನನಗೆ ಆಧಾರಗಳ ಮೂಲಕ ಮನವರಿಕೆಯಾದಂತೆ ಸ್ಥಾನಿಕರೆಂಬವರು ಒಂದು ವಿಶಿಷ್ಟವಾದ ಸ್ಥಾನವನ್ನು ಸಮಾಜದಲ್ಲಿ ಪಡೆದ ಬ್ರಾಹ್ಮಣ ವರ್ಗವೆಂದೂ, ಈ ಬ್ರಾಹ್ಮಣ್ಯವರ್ಗವು, ಬ್ರಾಹ್ಮಣ್ಯವನ್ನು ತುಳುನಾಡಿನಲ್ಲಿ ಪ್ರಥಮವಾಗಿ ಪ್ರಚಾರ ಮಾಡಿದ್ದಾಗಿಯೂ ಕಂಡು ಬಂತು. ಸ್ಥಾನಿಕರು ತುಳುನಾಡಿನ ಬ್ರಾಹ್ಮಣರಲ್ಲಿ ಮೊದಲಿಗರು. ಅವರು ಪ್ರಾಚೀನರು, ಅವರ ಹತೋಟಿಯಲ್ಲಿ ನಮ್ಮ ನಾಡಿನ ಪ್ರಾಮುಖ್ಯವಾದ ದೇವಾಲಯಗಳಿದ್ದುವು. ಅವರು ಒಂದು ಕಾಲದಲ್ಲಿ (ಸಾಮಾನ್ಯ ಕ್ರಿ.ಶ.15ನೆಯ ಶತಮಾನದ ವರೆಗೆ) ಉಚ್ಛ್ರಾಯಸ್ಥಿತಿಯಲ್ಲಿದ್ದರು. ಕಾಲ ಉರುಳಿದಂತೆ ಬೇರೆ ಬೇರೆ ಬ್ರಾಹ್ಮಣರ ಪಂಗಡಗಳು ನಮ್ಮ ನಾಡಿಗೆ ಬಂದು ನೆಲೆಸಿಕೊಂಡು ಅವರ ಸಂಖ್ಯೆ ಹೆಚ್ಚಾದಾಗ, ಧಾರ್ಮಿಕ ಭಾವನೆಯು ವಿಭಿನ್ನವಾದಾಗ, ಅಧಿಕಾರ ಹಸ್ತಾಂತರವಾದಾಗ ಈ ಮೂಲ ಬ್ರಾಹ್ಮಣರಾದ ಸ್ಥಾನಿಕರು ಪತನ ಹೊಂದಿದರು-ಎಂಬೀ ವಿಷಯಗಳನ್ನು ಕಂಡುಕೊಂಡೆನು''.

'ತುಳುನಾಡು' ಈ ಕೃತಿಯ ಪ್ರಕಾಶಕರು ಪ್ರೊ| ಪಾದೂರು ಶ್ರೀಪತಿ ತಂತ್ರಿಯವರು ತಿಳಿಸಿದಂತೆ ''ಕರ್ನಾಟಕದ ಕರಾವಳಿಯ ಇತಿಹಾಸಕಾರರ ಪರಂಪರೆಯಲ್ಲಿ ಚಿರಸ್ಥಾಯಿಯಾಗಿ ಅತ್ಯಂತ ಎತ್ತರದಲ್ಲಿ ಎದ್ದು ಕಾಣುವ ಹೆಸರುಗಳೆಂದರೆ ಡಾ| ಬಿ.ಎ. ಸಾಲೆತ್ತೂರ್ ಹಾಗೂ ಡಾ| ಪಾದೂರು ಗುರುರಾಜ ಭಟ್ಟರು. ತನ್ನ ಸ್ವಂತ ಸಮಾಜದ ಪೂರ್ವವನ್ನು ಯಾವುದೇ ಪೂರ್ವಗ್ರಹವಿಲ್ಲದೆ, ಎಡ-ಬಲ ಪಂಥವೆನ್ನುವ ಒಲವುಗಳ ಸೆಳೆತವಿಲ್ಲದೆ ಕೇವಲ ಸತ್ಯವೇನೆಂಬ ನಿಸ್ಪೃಹ ಕುತೂಹಲದಿಂದ ಅಗೆದು ಪರೀಕ್ಷಿಸುವ ಮನೋಧರ್ಮದ ಇತಿಹಾಸಜ್ಞರು ತೀರಾ ವಿರಳ.... ಅವರ ಕರಾವಳಿಯ ಸಾಮಾಜಿಕ-ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಪಟ್ಟ ಬರೆಹಗಳಲ್ಲಿ ಅವರ ವಸ್ತುನಿಷ್ಠ ಧೋರಣೆಯನ್ನು ನಾವು ನಿರಾಯಾಸವಾಗಿ ಗುರುತಿಸಬಹುದಾಗಿದೆ''.

# ಕನ್ನಡ ಕವಿಕಾವ್ಯ ಪರಿಚಯ-೩ : ವರಕವಿ ಮುದ್ದಣ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಹಿಂದಿನ ಸಂಚಿಕೆಯಿಂದ)

ಈ ನಡುವೆ ಪ್ರೌಢಶಾಲಾ ಅಧ್ಯಾಪಕ ಶ್ರೀ ಮಳಲಿ ಸುಬ್ಬರಾಯರಿಗೆ ಕುಂದಾಪುರದ ಬೋರ್ಡು ಹೈಸ್ಕೂಲಿಗೆ ವರ್ಗವಾಯಿತು. ಗುರುಶಿಷ್ಯರು ಅಗಲಿ ಇರಬೇಕಾಗಿ ಬಂದುದರಿಂದ ಮುದ್ದಣನಿಗೆ ಅತೀವ ಬೇಸರವಾಗಿ ಕೇವಲ ಪತ್ರ ವ್ಯವಹಾರದ ಮೂಲಕ ಇಬ್ಬರಲ್ಲಿ ಅಭಿಪ್ರಾಯಗಳ ವಿನಿಮಯ ನಡೆಯತೊಡಗಿತು. ಇಷ್ಟರಲ್ಲೇ ತೃಪ್ತನಾಗದ ಮುದ್ದಣನು ಬಹಳಷ್ಟು ಪ್ರಯತ್ನಪಟ್ಟು ಕುಂದಾಪುರ ಹೈಸ್ಕೂಲಿಗೇ ವರ್ಗ ಮಾಡಿಸಿಕೊಂಡು ಮಳಲಿಯವರನ್ನು ಪುನಃ ಸೇರಿಕೊಂಡನು. ತನ್ನ ಕಾವ್ಯ ರಚನಾ ಶಕ್ತಿಯನ್ನು ಕೇವಲ ಯಕ್ಷಗಾನ ಕೃತಿಗಳ ರಚನೆಗೇ ಸೀಮಿತಗೊಳಿಸದೆ ಮುದ್ದಣನು ತನ್ನ ಗುರುಗಳಾದ ಮಳಲಿ ಸುಬ್ಬರಾಯರಲ್ಲಿ ತಾನೊಂದು ಪ್ರೌಢ ಕಾವ್ಯವನ್ನು ಬರೆಯುವರೆ ಸೂಕ್ತ ವಿಷಯವನ್ನು ಒದಗಿಸಬೇಕೆಂದು ಕೇಳಿಕೊಂಡನು. ಮಳಲಿಯವರು ತನ್ನಲ್ಲಿರುವ ಸಂಸ್ಕೃತದ 'ಅದ್ಭುತ ರಾಮಾಯಣ'ವನ್ನು ಮುದ್ದಣನಿಗೆ ಕಥಾರೂಪದಲ್ಲಿ ಹೇಳಿದ್ದೇ ಅಲ್ಲದೆ ಮೂಲಗ್ರಂಥವನ್ನೂ ಓದಿ, ಅರ್ಥವನ್ನೂ ವಿವರಿಸಿದರು. ಮುದ್ದಣನು ಆಗ ಪ್ರಚಲಿತದಲ್ಲಿಲ್ಲದ ಸಾಧಾರಣ ಹತ್ತನೇ ಶತಮಾನದ ಕಾಲದಲ್ಲಿ ಪ್ರಚಲಿತವಾಗಿದ್ದ ಹಳೆಗನ್ನಡವನ್ನು ಊಹಿಸಿ, ಯೋಚಿಸಿ, ಆ ಕನ್ನಡದಲ್ಲಿಯೇ 'ಅದ್ಭುತ ರಾಮಾಯಣ' ಕೃತಿಯನ್ನು ಬರೆಯತೊಡಗಿದನು. ತನ್ನ ಬರವಣಿಗೆಯನ್ನು ಆಗಾಗ ಮಳಲಿಯವರಿಗೆ ತೋರಿಸಿ ಅವರಿಂದ ಸೂಕ್ತ ತಿದ್ದುಪಡಿ, ಮಾರ್ಗದರ್ಶನವನ್ನು ಪಡೆಯುತ್ತಿದ್ದನು. ಮಳಲಿಯವರ ಖಾಸಗಿ ಪುಸ್ತಕ ಭಂಡಾರದ ಕಡೆಗೆ ಮುದ್ದಣನ ದೃಷ್ಟಿ ಹರಿದು, ಅದರಲ್ಲಿರುವ ಕೆಲವೊಂದು ಪುಸ್ತಕಗಳನ್ನು ತಂದು, ಆಸಕ್ತಿಯಿಂದ ಓದಿ ತನ್ನ ಜ್ಞಾನ ಭಂಡಾರವನ್ನು ವೃದ್ಧಿಸಿಕೊಂಡನು. ಇವುಗಳಲ್ಲಿ ಕೇಶಿರಾಜನ ಶಬ್ದ ಮಣಿದರ್ಪಣ, ಕಬ್ಬಿಗರ ಕೈಪಿಡಿ, ಹಳಗನ್ನಡ ವ್ಯಾಕರಣ ಸೂತ್ರಗಳು ಮುಂತಾದುವುಗಳನ್ನು ಚೆನ್ನಾಗಿ ಅಭ್ಯಸಿಸಿ, ಕನ್ನಡದ ಎಷ್ಟೋ ಪದಗಳು ಹಳಗನ್ನಡದಲ್ಲಿ ತಾಳಿಕೊಂಡಿದ್ದ ಅಪಭ್ರಂಶ ರೂಪಗಳನ್ನು ಕಲಿತುಕೊಂಡು, ಅವುಗಳನ್ನು ಟಿಪ್ಪಣಿ ಮಾಡಿಟ್ಟುಕೊಂಡು ತನ್ನ ಗ್ರಂಥದಲ್ಲಿ ಬಳಗೆಗೆ ತಂದನು. ಇದರಿಂದಾಗಿ ಮುದ್ದಣನ ಜ್ಞಾನದಾಹ, ಅಭ್ಯಾಸದಲ್ಲಿರುವ ನಿಷ್ಠೆ ಇತ್ಯಾದಿಗಳಿಂದಾಗಿ ಸಂತುಷ್ಟಳಾದ ವಾಗ್ದೇವಿಯು ಅವನಿಗೊಲಿದಳೋ ಎಂಬಂತೆ ಪಾಂಡಿತ್ಯಪೂರ್ಣವಾದ, ಹಳಗನ್ನಡ ಶಬ್ದಪುಂಜಗಳಿಂದ ಅಲಂಕೃತವಾದ 'ಅದ್ಭುತ ರಾಮಾಯಣ'ವು ಕವಿಯ ಲೇಖನಿಯಿಂದ ಅದ್ಭುತವಾಗಿ ಮೂಡಿಬಂದಿತು. ತನ್ನ ಹಸ್ತಪ್ರತಿಯನ್ನು ಮುದ್ದಣನು ತಂದು ಮಳಲಿಯವರ ಕೈಯಲ್ಲಿಟ್ಟಾಗ ಅವರು ಮುಕ್ತಕಂಠದಿಂದ ಅದನ್ನು ಹೊಗಳಿದ್ದೇ ಅಲ್ಲದೆ ವಿ.ವಿ. ನಿಲಯದ ಪರೀಕ್ಷೆಗಳಿಗೆ ಪಠ್ಯಪುಸ್ತಕವಾಗಬಹುದಾದ ಕೃತಿಯಿದು ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

ಆದರೆ ಇದು ಮುದ್ರಣಾಲಯಕ್ಕೆ ಹೋಗಲು ಧನದ ಕೊರತೆಯಿದ್ದುದರಿಂದ, ಈ ಕೃತಿಯು ಅನ್ಯಕರ್ತೃಕವೆಂಬ ಕಾರಣವನ್ನು ಹೇಳಿ ಮೈಸೂರಿನ 'ಕಾವ್ಯಮಂಜರಿ' ಸಂಸ್ಥೆಯ ಸಂಪಾದಕರಿಗೆ ಪತ್ರ ಬರೆದು ಅವರ ಅನುಮತಿ ಕೇಳಿ, ಮುದ್ರಣ ಮತ್ತು ಪ್ರಕಾಶನಕ್ಕೆ ವಿನಂತಿ ಮಾಡಿಕೊಳ್ಳುವಂತೆ ಮಳಲಿಯವರು ಸಲಹೆಯಿತ್ತರು. ಈ ಮೇರೆಗೆ ಮದ್ದಣನು ಕಾವ್ಯಮಂಜರಿಗೆ ಪತ್ರ ಬರೆದು, ತನಗೆ ಓಲೆಗರಿಗಳಲ್ಲಿರುವ 'ಅದ್ಭುತ ರಾಮಾಯಣ'ವೆಂಬ ಹಳಗನ್ನಡ ಕೃತಿಯೊಂದು ಸಿಕ್ಕಿದೆಯೆಂದೂ, ಕವಿ ಯಾರೆಂಬುದು ಗೊತ್ತಿಲ್ಲವೆಂದು ತಿಳಿಸಿ ಪತ್ರ ಬರೆದನು. ಕಾವ್ಯಮಂಜರಿಯವರಿಂದ ಅನುಮತಿ ಬಂದ ಮೇರೆಗೆ 'ಅದ್ಭುತ ರಾಮಾಯಣ'ದ ಹಸ್ತಪ್ರತಿಯನ್ನು ಕಳುಹಿಸಿದನು. ಇದು ಉತ್ಕೃಷ್ಟವಾಗಿದ್ದು ಪ್ರಕಟಣೆಗೆ ಯೋಗ್ಯವೆಂದು ಕಂಡುಕೊಂಡ ಕಾವ್ಯ ಮಂಜರಿಯವರು ಮುದ್ರಿಸಿ ಪ್ರಕಟಿಸಿದರು. ತಾ.1-3-1895ರಲ್ಲಿ 'ಅದ್ಭುತ ರಾಮಾಯಣ'ದ ಹಸ್ತಪ್ರತಿಯನ್ನು ಕವಿಯು ಮೈಸೂರಿನ ಕಾವ್ಯ ಮಂಜರಿಗೆ ಕಳುಹಿಸಿದ್ದು ಇದೇ ವರ್ಷ ಜುಲೈ ತಿಂಗಳ ಕಾವ್ಯಮಂಜರಿಯ ಮಾಸ ಪತ್ರಿಕೆಯಲ್ಲಿ ಪ್ರಥಮವಾಗಿ ಪ್ರಕಟಗೊಂಡು ಮೂರು ತಿಂಗಳು ಧಾರಾವಾಹಿಯಾಗಿದ್ದು, ಕೊನೆಗೆ ಪುಸ್ತಕರೂಪದಲ್ಲಿ ಪ್ರಕಟಿಸಲ್ಪಟ್ಟಿತು. ಹಳೆಗನ್ನಡದ ಕೆಲವು ಪದಗಳಿಗೆ ಅರ್ಥ ವಿವರಣೆಯನ್ನೂ, ಕೃತಿಯ ಕವಿ ಮತ್ತು ಕಾಲಗಳ ವಿಚಾರವನ್ನೂ ಕೇಳಿ ಕಾವ್ಯಮಂಜರಿಯವರು ಪತ್ರ ಬರೆದರು. ಇದಕ್ಕೆ ಮುದ್ದಣನು ಅದು ಯಾವುದೂ ತನಗೆ ತಿಳಿಯದೆಂದೂ, ಓಲೆಗರಿಯ ಹಸ್ತಪ್ರತಿಯಲ್ಲಿದ್ದಂತೆ ತಾನು ಪ್ರತಿ ಮಾಡಿ ಕಳುಹಿಸಿರುವೆನೆಂದೂ ಉತ್ತರ ಬರೆದನು. ಕಾವ್ಯಮಂಜರಿಯವರು ತಮ್ಮ ಚಂದಾದಾರರ ಪಟ್ಟಿಯಲ್ಲಿ ಕವಿ ಮುದ್ದಣನ ಹೆಸರನ್ನೂ ಸೇರಿಸಿಕೊಂಡು ಉಚಿತವಾಗಿ ಪ್ರತೀ ತಿಂಗಳೂ ತಮ್ಮ ಒಂದು ಸಂಚಿಕೆಯನ್ನು ಅವನಿಗೆ ಕಳುಹಿಸತೊಡಗಿದರು. ಈ ಕಾವ್ಯದಲ್ಲಿ ಕವಿಯು ಅಪೂರ್ವವಾದ ತದ್ಭವಗಳನ್ನೂ, ಶಬ್ದಾಲಂಕಾರಗಳ ವೈಭವಗಳನ್ನೂ ಮೆರೆದು ಕಾವ್ಯವನ್ನು ರಚಿಸಿರುವನು.- 'ಚಕ್ರಿಶಾಯಿಯಪ್ಪ ಚಕ್ರಿಯನುಗ್ರಹದಿಂ ಚಕ್ರಮಂ ಚಕ್ರವರ್ತಿ ಕೈಗೊಂಡು', 'ಕಜ್ಜಮಂಸಜ್ಜುಗೈವ ಉಜ್ಜುಗಮಂ ಉಸಿರ್ವವು', 'ಪರ್ವತನುಂ ಪದ್ಮನಾಭನ ಪದದೊಲ್ಮೆಯಂ ಪಡೆದು ಪವಣರಿತು ಪೆಣ್ಣಂ ಪಿಡಿವೆನೆನುತೆ ಪಾಲ್ಗಡಲೆಡೆಗೆ ಪರಿತಂದಂ'- ಹೀಗೆ ಚಕ್ಕ, ಕಜ್ಜ 'ಪ'ಕಾರ ಮುಂತಾದ ಶಬ್ದಾಲಂಕಾರಗಳು ಈ ಗ್ರಂಥದಲ್ಲಿ ಅಲ್ಲಲ್ಲಿ ಮೆರೆದು ಕೃತಿಯನ್ನು ಆಕರ್ಷಕವಾಗಿ ಮಾಡಿವೆ.

(ಮುಂದುವರಿಯುವುದು)

# ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ ಹಾಗೂ ಶಂಕರ ಜಯಂತಿ ಆಚರಣೆ

ಶ್ರೀ ಶಂಕರ ಜಯಂತಿಯ ಅಂಗವಾಗಿ ತಾ.29-4-2012ರಂದು ಉಡುಪಿಯ ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಉಪನಯನ, ಶ್ರೀ ಶಂಕರತತ್ವ ಆಧಾರಿತ ಪ್ರವಚನ, ಸೌಂದರ್ಯಲಹರಿ ಸ್ಪರ್ಧೆ, ರಂಗೋಲಿ ಸ್ಪರ್ಧೆ ಹಾಗೂ ದಾಸ ಸಾಹಿತ್ಯ ಸಂಗೀತ ರಸಮಂಜರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತು.

29-04-2012ರಂದು ಬೆಳಿಗ್ಗೆ ಶ್ರೀಶಾರದಾ ದೇವಸ್ಥಾನದಲ್ಲಿ ಬ್ರಹ್ಮಶ್ರೀ ಪಾವಂಜೆ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಶಾರದಾ ಮಾತೆ, ಗಣಪತಿ ಮತ್ತು ಶ್ರೀಶಂಕರ ಭಗವತ್ಪಾದರಿಗೆ ವಿಶೇಷ ಪೂಜೆ ನೆರವೇರಿತು. ಈ ಸಂದರ್ಭದಲ್ಲಿ ಸಂಘದ ಸದಸ್ಯರು, ಮಹಿಳೆಯರು ಮತ್ತು ಪರಿಸರದ ಭಕ್ತ ಬಾಂಧವರು ಅಧಿಕ ಸಂಖ್ಯೆಯಲ್ಲಿ ನೆರೆದಿದ್ದರು. ಸಂಘದ ಸದಸ್ಯರಿಂದ ರುದ್ರಪಠಣ ಮತ್ತು ಮಹಿಳೆಯರಿಂದ ಭಜನೆ, ಲಲಿತಾ ಸಹಸ್ರನಾಮ ಪಾರಾಯಣ ನಡೆಯಿತು.

ಸಾಮೂಹಿಕ ಉಪನಯನದ ಕಾರ್ಯಕ್ರಮದಲ್ಲಿ ಸಮಾಜದ ಇಬ್ಬರು ವಟುಗಳಿಗೆ ಬ್ರಹ್ಮೋಪದೇಶ ನೀಡಲಾಯ್ತು. ಈ ಕಾರ್ಯಕ್ರಮದಲ್ಲಿ ವಟುಗಳ ಸಂಬಂಧಿಕರು, ಸಮಾಜ ಬಾಂಧವರು ಅಲ್ಲದೆ ಸಂಘದ ಪದಾಧಿಕಾರಿಗಳು, ಸದಸ್ಯರು ಪಾಲ್ಗೊಂಡಿದ್ದರು.

ಮಧ್ಯಾಹ್ನ ಮಹಾಪೂಜೆಯ ಬಳಿಕ ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ನೆರವೇರಿತು.

ಅಪರಾಹ್ನ ಜ್ಞಾನಭಾರತಿ (ರಿ.) ಇವರ ಸಹಯೋಗದೊಂದಿಗೆ ಶ್ರೀಶಂಕರ ತತ್ವ ಆಧಾರಿತ ಪ್ರವಚನ ಕಾರ್ಯಕ್ರಮ ನೆರವೇರಿತು. ಶ್ರೀಕ್ಷೇತ್ರ ಶೃಂಗೇರಿಯ ಪ್ರಾಂತಿಯ ಧರ್ಮದರ್ಶಿ ಡಾ। ಎಚ್.ವಿ. ನರಸಿಂಹಮೂರ್ತಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಇವರು ತಮ್ಮ ಪ್ರವಚನದಲ್ಲಿ ಶ್ರೀ ಶಂಕರರ ಜನ್ಮವೃತ್ತಾಂತ, ಅವರ ಸಾಧನೆ, ಅದ್ವೈತ ಸಿದ್ಧಾಂತದ ಕೊಡುಗೆ, ಅವರು ಸ್ಥಾಪಿಸಿದ ಗುರುಪೀಠಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು. ಅವರು ಶ್ರೀ ಶಂಕರ ಮತ್ತು ಬುದ್ಧನ ಸಾಧನೆಗಳ ತುಲನಾತ್ಮಕ ವಿಮರ್ಶೆಯನ್ನು ಮಾಡಿ, ಹೇಗೆ ಅದ್ವೈತ ಧರ್ಮವು ಹಿಂದುಗಳಲ್ಲಿ ಜನಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಯ್ತು ಎಂದು ತಿಳಿಸಿದರು.

ಬಳಿಕ ಪೂರ್ವಾಹ್ನ ನಡೆದ ಶಂಕರ ವಿರಚಿತ ಸೌಂದರ್ಯಲಹರಿ ಶ್ಲೋಕಗಳ ಕಂಠಪಾಠ ಸ್ಪರ್ಧೆ, ರಂಗವಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನಗಳನ್ನು ನೀಡಲಾಯ್ತು. ಜ್ಞಾನಭಾರತಿ ಸಂಸ್ಥೆಯ ಅಧ್ಯಕ್ಷ ಶ್ರೀ ಸಿ.ಎಸ್.ರಾವ್ ಅಧ್ಯಕ್ಷತೆ ವಹಿಸಿದ್ದರು. ಜ್ಞಾನಭಾರತಿ (ರಿ.)ನ ಕಾರ್ಯದರ್ಶಿ ಡಾ। ಎಸ್.ಎಲ್.ಕಾರ್ಣಿಕ್ ಸ್ವಾಗತಿಸಿ ವಂದಿಸಿದರು. ಶ್ರೀ ನಿಡುವಜೆ ರಾಮಭಟ್ ಕಾರ್ಯಕ್ರಮ ನಿರೂಪಿಸಿದರು.

ಸಂಜೆ ದಾಸಸಾಹಿತ್ಯ ಸಂಗೀತ ರಸಮಂಜರಿ ಕಾರ್ಯಕ್ರಮವನ್ನು ಶ್ರೀ ರಾಮಕೃಷ್ಣ ಕಾಟುಕುಕ್ಕೆ ಮತ್ತು ಬಳಗದವರು ನಡೆಸಿಕೊಟ್ಟರು. ಹಾಡುಗಳ ಹಿನ್ನೆಲೆ ವಿಶ್ಲೇಷಣೆಯನ್ನು ವಿದ್ವಾನ್ ಶ್ರೀ ಬಿ.ಗೋಪಾಲಾಚಾರ್ಯರು ನಡೆಸಿಕೊಟ್ಟರೆ, ಕೀ-ಬೋರ್ಡಿನಲ್ಲಿ ಶ್ರೀ ಬಿ. ಪ್ರಕಾಶ್‌ರಾವ್ ಸಹಕರಿಸಿದರು. ಶ್ರೀಮತಿ ಮತ್ತು ಶ್ರೀ ಬಿ.ಜಯರಾಮರಾವ್ ಕಾರ್ಯಕ್ರಮದ ಪ್ರಾಯೋಜಕತ್ವವನ್ನು ವಹಿಸಿದ್ದರು.

ಸುಮಾರು 2 ತಾಸುಗಳ ಈ ರಸಮಂಜರಿ ಕಾರ್ಯಕ್ರಮಕ್ಕೆ ಎಲ್ಲರೂ ಮೆಚ್ಚುಗೆ ಸೂಚಿಸಿದರು. ಹೀಗೆ ಶಂಕರ ಜಯಂತಿಯು ಅರ್ಥಪೂರ್ಣವಾಗಿ ಆಚರಿಸಲ್ಪಟ್ಟು ಸಂಗೀತ ಕಾರ್ಯಕ್ರಮವು ಎಲ್ಲರ ಪ್ರಶಂಸೆಗೆ ಪಾತ್ರವಾಯ್ತು. **ವರದಿ : ಎಚ್.ಎನ್.ಶ್ಯಾನುಭಾಗ್**

## ಮಂಗಳೂರು : 'ನಡೆದು ಬಂದ ದಾರಿ ವಂಶವಾಣಿ' ಪುಸ್ತಕ ಬಿಡುಗಡೆ



ಉಚ್ಚಿಲ, ಸಾಂತೂರು ಮತ್ತು ಕಿಗ್ಗ ಕುಟುಂಬಗಳ ಸಂತತಿ ನಕ್ಷೆ ಮತ್ತು ವಿವರಗಳನ್ನು ಒಳಗೊಂಡ, ಕುಟುಂಬ "ನಡೆದ ಬಂದ ದಾರಿ ವಂಶವಾಣಿ" ಶಿರೋನಾಮೆಯಿಂದ ಬಿಡುಗಡೆ ಸಮಾರಂಭ ತಾ.6-5-2012 ಆದಿತ್ಯವಾರ ದಂದು ಮಂಗಳೂರಿನ ಸುಬ್ರಹ್ಮಣ್ಯ ಸಭಾದಲ್ಲಿ ನಡೆಯಿತು.

ಶ್ರೀ ಯು.ಎಸ್.ಸದಾಶಿವ ರಾವ್ ಮತ್ತು ಶ್ರೀ ಯು.ಎಸ್.ಗೋಪಾಲಕೃಷ್ಣ ರಾವ್ ಸಹೋದರರ ಸಂಪಾದಕತ್ವದಲ್ಲಿ ಪ್ರಕಟಿಸಲ್ಪಟ್ಟ ಈ ಹೊತ್ತಿಗೆ (ಪುಸ್ತಕ) ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ ಕುಟುಂಬ ಸದಸ್ಯರು ಹಾಗೂ ಅತಿಥಿಗಳ ಸಮ್ಮುಖದಲ್ಲಿ ಬಿಡುಗಡೆಗೊಂಡಿತು.

ಸಮಾಜದ ಹಿರಿಯರಾದ ಶ್ರೀ ವೈ.ಎಮ್. ಶ್ರೀಧರ ರಾವ್ ಅದಮಾರು ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ। ಸಂತೋಷ್ ಕುಮಾರ್ ಶಾಸ್ತ್ರಿ, ಶ್ರೀಮತಿ ನಿರ್ಮಲ ಹರಿಕೃಷ್ಣ ರಾವ್, ಉಪನ್ಯಾಸಕಿ, ವೈಕುಂಠ ಬಾಳಿಗ ಕಾನೂನು ವಿದ್ಯಾಲಯ ಉಡುಪಿ, ಶ್ರೀ ಕರುಣಾಕರ ಬೆಳ್ಳೆ, ಕಾರ್ಯದರ್ಶಿ ಸುಬ್ರಹ್ಮಣ್ಯ ಸಭಾ ಮಂಗಳೂರು, ಶ್ರೀ ವಿದ್ವಾನ್ ಯು.ಕೆ.ಪ್ರವೀಣ್ ನೃತ್ಯ ವಿದ್ಯಾನಿಲಯ ಕದ್ರಿ, ಮಂಗಳೂರು ಇವರುಗಳು ಭಾಗವಹಿಸಿದ್ದರು.

ವೇದಿಕೆಯಲ್ಲಿ ಕೃಷ್ಣಮೂರ್ತಿ, ಅಧ್ಯಕ್ಷರು ದ.ಕ.ಜಿಲ್ಲಾ ದ್ರಾವಿಡ ಬ್ರಾಹ್ಮಣ ಸಂಘ, ಡಾ। ದಿವಾಕರ ರಾವ್ ಸಾಂತೂರು, ಶ್ರೀ ಸತ್ಯನಾರಾಯಣ ರಾವ್ ಬೆಂಗಳೂರು, ಸಂಪಾದಕರುಗಳಾದ ಶ್ರೀ ಯು.ಎಸ್. ಸದಾಶಿವ ರಾವ್ ಮತ್ತು ಯು.ಎಸ್. ಗೋಪಾಲಕೃಷ್ಣ ರಾವ್ ಉಪಸ್ಥಿತರಿದ್ದರು. ಶ್ರೀಮತಿ ಉಷಾ ಪ್ರವೀಣ್ ಪ್ರಾರ್ಥನೆ ಸಲ್ಲಿಸಿದರು.

ಮುಖ್ಯಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಶ್ರೀಮತಿ ನಿರ್ಮಲಾ ಹರಿಕೃಷ್ಣ ರಾವ್ ಅವರು ಈ ವಂಶವಾಣಿಯಿಂದ ಹಲವು ಕುಟುಂಬಗಳ ಸಂತತಿ ನಕ್ಷೆಗಳು ಹೊರಹೊಮ್ಮಬಹುದು. ವಂಶವಾಣಿಯ ಸಿದ್ಧತೆಯಲ್ಲಿ ಅಪಾರ ಶ್ರಮ ವಹಿಸಿದ ಸಂಪಾದಕರುಗಳನ್ನು ಅಭಿನಂದಿಸಿದರು. ಶ್ರೀ ಡಾ। ಸಂತೋಷ್ ಕುಮಾರ್ ಶಾಸ್ತ್ರಿ ಅತಿಥಿಗೊಡಗೂಡಿ ವಂಶವಾಣಿಯನ್ನು ಬಿಡುಗಡೆಗೊಳಿಸಿದರು.

ಸ್ವಾಗತ ಗೀತೆಯೊಂದಿಗೆ ಶ್ರೀಮತಿ ಸುಚೇತ ಡಿ.ರಾವ್, ಶ್ರೀಮತಿ ಪವಿತ್ರ ಮುರಳೀಧರ ರಾವ್, ಶ್ರೀಮತಿ ಸುಮಿತಾ ವಸಂತರಾವ್, ಕುಮಾರಿ ಶ್ರದ್ಧಾ ರಾವ್, ಕು। ಪ್ರಾರ್ಥನಾ, ಮಾಸ್ಟರ್ ವಿಶಾಖ ಡಿ.ರಾವ್ ಸ್ವಾಗತ ಹಾಡಿದರು. ಶ್ರೀ ಯು.ಎಸ್.ಸದಾಶಿವ ರಾವ್ ಪ್ರಾಸ್ತಾವಿಕವಾಗಿ ಮಾತಾಡಿ ವಂಶವಾಣಿಯ ಬಗ್ಗೆ ವಿವರಣೆಯನ್ನು ನೀಡಿದರು.

ವಿದ್ವಾನ್ ಯು.ಕೆ.ಪ್ರವೀಣ್ ವಂದಿಸಿದರು. ಈ ಸಂದರ್ಭದಲ್ಲಿ ಸತ್ಯನಾರಾಯಣ ಪೂಜೆಯನ್ನು ನೆರವೇರಿಸಲಾಯಿತು. ಮಧ್ಯಾಹ್ನ ಭೋಜನದ ಬಳಿಕ ನೃತ್ಯ ವಿದ್ಯಾನಿಲಯ ಕದ್ರಿ ಇದರ ಸದಸ್ಯರಿಂದ ವಿದ್ವಾನ್ ಯು.ಕೆ.ಪ್ರವೀಣ್ ನಿರ್ದೇಶನದಲ್ಲಿ ''ಭಸ್ಮಾಸುರ ಮೋಹಿನಿ'' ಎಂಬ ನೃತ್ಯರೂಪಕ ನಡೆಯಿತು.

**-ಯು.ಎಸ್.ಸದಾಶಿವರಾವ್**

## ಉಡುಪಿ : ಕರಾವಳಿ ಕರ್ನಾಟಕದ 'ರಂಗೋಲಿ ಕಲೆ' ಬಿಡುಗಡೆ



ರಂಗೋಲಿ ಚಿತ್ರಗಳ ಕುರಿತಾಗಿ ಆಳವಾಗಿ ಅಧ್ಯಯನ ನಡೆಸಿ ಹೊರ ತರಲಾದ ಡಾ। ಭಾರತೀ ಮರವಂತೆ ಅವರ ರಂಗೋಲಿ ಸಂಶೋಧನಾ ಗ್ರಂಥ ಕರಾವಳಿ ಕರ್ನಾಟಕದ 'ರಂಗೋಲಿ ಕಲೆ' ಕೃತಿ ಏಪ್ರಿಲ್ 17 ಶ್ರೀಕೃಷ್ಣ ಮಠದ ಮಧ್ವಮಂಟಪದಲ್ಲಿ ಲೋಕಾರ್ಪಣೆಗೊಂಡಿತು. ಹೊನ್ನಾವರದ ಜಾನಪದ ತಜ್ಞರಾದ ಡಾ। ಶಾಂತಿ ನಾಯಕ್ ಕೃತಿಯನ್ನು ಅನಾವರಣಗೊಳಿಸಿ ಮಾತನಾಡಿ, ಐದು ಸಾವಿರ ವರ್ಷಗಳ ಭವ್ಯ ಪರಂಪರೆಯನ್ನು ಹೊಂದಿರುವ ರಂಗೋಲಿ ಕುರಿತಾಗಿ ತಳಸ್ಪರ್ಶಿ ಅಧ್ಯಯನ ನಡೆಸಿ ಹೊರತರಲಾದ ಈ ಗ್ರಂಥ ಅಪೂರ್ವವಾಗಿದೆ. ರಂಗೋಲಿ ಕುರಿತಾಗಿ ಆಸಕ್ತಿ ಹೊಂದಿರುವ ಎಲ್ಲರಿಗೂ ಇದೊಂದು ಆಕರ ಗ್ರಂಥವಾಗಲಿದೆ ಎಂದರು. ಪರ್ಯಾಯ ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವವಲ್ಲಭ ತೀರ್ಥ ಶ್ರೀಪಾದರು ರಂಗೋಲಿ ಕಲಾ ಪರಿಷತ್ತನ್ನು ಉದ್ಘಾಟಿಸಿದರು. ಕಾರ್ಯಕ್ರಮಕ್ಕೂ ಮುನ್ನ ನಾದವೈಭವಂ ವಾಸುದೇವ ಭಟ್ ಅವರಿಂದ ವಾದಿರಾಜ ಕೀರ್ತನೆಗಳ ಗಾಯನ ಜರಗಿತು.

ಕೃಪೆ : **ಉದಯವಾಣಿ**

## ಪಡುಬಿದ್ರಿ : ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಶಾಖೆ ಉದ್ಘಾಟನೆ



ಪಡುಬಿದ್ರಿ, ಎ. 25: ನಾಗಾಲೋಟದಿಂದ ಬೆಳೆಯುತ್ತಿರುವ ಪಡುಬಿದ್ರಿ ಪಟ್ಟಣದ ಅಗತ್ಯತೆಯನ್ನು ಕಂಡುಕೊಂಡು ಈಗಾಗಲೇ ಸಹಕಾರಿ ರಂಗದಲ್ಲಿ ಮೌನಕ್ರಾಂತಿಯನ್ನು ಮಾಡುತ್ತಿರುವ ಶ್ರೀ ಶಾರದಾ ಕ್ರೆಡಿಟ್ ಕೋ ಓಪರೇಟಿವ್ ಸೊಸೈಟಿ ತನ್ನ ಶಾಖೆಯನ್ನು ತೆರೆದಿರುವುದು ಶ್ಲಾಘನೀಯ. ಶಾಖೆಯು ಶೀಘ್ರ ಅಭಿವೃದ್ಧಿಯಾಗಲಿ ಎಂದು ಮಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ನಿರ್ದೇಶಕ ಎಂ. ಆರ್. ವಾಸುದೇವ ಹೇಳಿದ್ದಾರೆ.

ಅವರು ಪಡುಬಿದ್ರಿಯ ಕಾರ್ಕಳ ರಸ್ತೆಯಲ್ಲಿನ ಗೋಕುಲ ಸಂಕೀರ್ಣದ ಪ್ರಥಮ ಮಹಡಿಯಲ್ಲಿ ಅಕ್ಷಯ ತೃತೀಯಾ ದಿನ ಶ್ರೀ ಶಾರದಾ ಕ್ರೆಡಿಟ್ ಕೋ ಓಪರೇಟಿವ್ ಸೊಸೈಟಿಯ ಪಡುಬಿದ್ರಿ ಶಾಖೆಯನ್ನು ಉದ್ಘಾಟಿಸಿ ಆ ಬಳಿಕದ ಸಭಾ ಕಾರ್ಯಕ್ರಮದಲ್ಲಿ ಮಾತಾಡುತ್ತಿದ್ದರು.

ಖಾಸಗಿ ರಂಗದ ಬ್ಯಾಂಕುಗಳು ಸರಕಾರಿ ರಂಗದ ಬ್ಯಾಂಕುಗಳಿಗಿಂತ ಉತ್ತಮವಾಗಿ ಗ್ರಾಹಕರನ್ನು ಬಲುಬೇಗನೇ ತಲುಪುತ್ತಿದ್ದು

(6ನೇ ಪುಟಕ್ಕೆ...)

## ಎರ್ಮಾಳು : ಯಕ್ಷಗಾನ-ಯಕ್ಷಗುಚ್ಛ ಪ್ರಸಂಗ ಪುಸ್ತಕ ಬಿಡುಗಡೆ



ಎರ್ಮಾಳು ವಾಸುದೇವ ರಾವ್ ಇವರು ರಚಿಸಿದ ಯಕ್ಷಗಾನ-'ಯಕ್ಷಗುಚ್ಛ' ಪ್ರಸಂಗ ಪುಸ್ತಕದ ಬಿಡುಗಡೆಯು ಎರ್ಮಾಳು ವಾಸುದೇವ ರಾಯರ ಮನೆಯಲ್ಲಿ ನಡೆಯಿತು.

ವೈ. ರಘುರಾಮ ರಾವ್ ಅಧ್ಯಕ್ಷತೆ ವಹಿಸಿದ್ದರು. ಎಲ್ಲೂರಿನ ನಿವೃತ್ತ ಮುಖ್ಯೋಪಾಧ್ಯಾಯ ವೈ.ಸುಬ್ಬರಾವ್ ಮುಖ್ಯ ಅತಿಥಿಯಾಗಿದ್ದರು. ಡಾ। ಸುಬ್ರಹ್ಮಣ್ಯ ರಾವ್ ಎರ್ಮಾಳು, ಉಮೇಶ್‌ರಾವ್ ಎರ್ಮಾಳು, ಜಗದೀಶ ರಾವ್ ದಂಪತಿ ಉಪಸ್ಥಿತರಿದ್ದರು. ವೈ.ಭುವನೇಂದ್ರ ರಾವ್ ತಮ್ಮ ಅನಿಸಿಕೆಗಳನ್ನು ತಿಳಿಸಿದರು.

ಜಗದೀಶರಾವ್ ಎಲ್ಲೂರು ಇವರನ್ನು ಸಮ್ಮಾನಿಸಲಾಯಿತು. ಶ್ರೀಮತಿ ವಾಣಿ ಸತೀಶ್‌ರಾವ್ ಮತ್ತು ಮಾ। ವಿಶ್ವೇಶರಾವ್ ಎಲ್ಲೂರು ಇವರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು.

'ಯಕ್ಷಗಾನ ವೈವಿಧ್ಯ' ಎಂಬ ವಿಶೇಷ ಕಾರ್ಯಕ್ರಮವನ್ನು ಶ್ರೀ ಹೆರಂಜಾಲು ಗೋಪಾಲ ಗಾಣಿಗರು ಇತರ ಕಲಾವಿದರೊಂದಿಗೆ ನಡೆಸಿಕೊಟ್ಟರು.

ಕೃಪೆ : **ಉದಯವಾಣಿ**

## ಪಡುಬಿದ್ರಿ : ಶ್ರೀಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಶಾಖೆ ಉದ್ಘಾಟನೆ

ಸಹಕಾರಿ ರಂಗವೂ ಇದಕ್ಕೇನೂ ಕಡಿಮೆ ಇಲ್ಲವೆಂದೂ ವಾಸುದೇವ್ ಈ ಸಂದರ್ಭದಲ್ಲಿ ಹೇಳಿದರು.

ಸಭಾಧ್ಯಕ್ಷತೆಯನ್ನು ವಹಿಸಿದ್ದ ಕಾಪು ಶಾಸಕ ಲಾಲಾಜಿ ಮೆಂಡನ್ ಉಡುಪಿ ಜಿಲ್ಲೆಯು ವಿದ್ಯಾಕ್ಷೇತ್ರ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳ ತವರೂರಾಗಿದೆ. ಹೊರರಾಜ್ಯಗಳಲ್ಲಿ ಇಡಿಯ ರಾಜ್ಯಗಳಲ್ಲಿ ಒಟ್ಟಾರೆ ಬ್ಯಾಂಕಿಂಗ್ ಕ್ಷೇತ್ರದಲ್ಲಾದ ಒಟ್ಟು ಬದಲಾವಣೆಗಳು ಕರ್ನಾಟಕದಲ್ಲಿ ಪ್ರತಿಯೊಂದು ಜಿಲ್ಲೆ, ಜಿಲ್ಲೆಗಳಲ್ಲೂ ಆಗಿವೆ. ಅದರಲ್ಲೂ ಉಡುಪಿ ಜಿಲ್ಲೆಯು ಬೆಳವಣಿಗೆಯ ದೃಷ್ಟಿಯಿಂದ ಸವ್ಯಸಾಚಿ ಎನಿಸಿಕೊಂಡಿದೆ. ಶ್ರೀ ಶಾರದಾ ಕ್ರೆಡಿಟ್ ಕೊ ಓಪರೇಟಿವ್ ಸೊಸೈಟಿಯೂ ಉತ್ತಮ ಗ್ರಾಹಕ ಸೇವೆಯೊಂದಿಗೆ ಯಶಸ್ವಿಯಾಗಿ ಬೆಳೆಯಲಿ ಎಂದು ಹಾರೈಸಿದರು.

ಸಭೆಯನ್ನುದ್ದೇಶಿಸಿ ಆರ್‌ಸಿಎಫ್‌ನ ನಿವೃತ್ತ ಅಧಿಕಾರಿ ಎಂ. ಕೆ. ಮೋಹನ ರಾವ್, ಕುಂದಾಪುರ ಕಿರಿಮಂಜೇಶ್ವರದ ಮೂಕಾಂಬಿಕ ಟಿಂಬರ್ಸ್‌ನ ಮಾಲಕ ಉಮೇಶ್ ಶ್ಯಾನು

(...4ನೇ ಪುಟದಿಂದ)

ಭೋಗ್, ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಪಿ. ರವೀಂದ್ರನಾಥ ಜಿ. ಹೆಗ್ಡೆ, ಪಡುಬಿದ್ರಿ ಗ್ರಾ. ಪಂ. ಅಧ್ಯಕ್ಷೆ ವಿಜಯಲಕ್ಷ್ಮೀ ಆಚಾರ್ಯ ಮಾತಾಡಿದರು.

ವೇದಿಕೆಯಲ್ಲಿ ಸೊಸೈಟಿಯ ಕಾರ್ಯದರ್ಶಿ ಪಟ್ಟಾಭಿರಾಮ ಎನ್.ಎಸ್. ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸೊಸೈಟಿಯ ನೂತನ ಪಡುಬಿದ್ರಿ ಶಾಖೆಯಲ್ಲಿ ಉಳಿತಾಯ ಖಾತೆಗಳನ್ನು ತೆರೆದ ಹಾಗೂ ನಿರಖು ಠೇವಣಿಯಿರಿಸಿದ ಗ್ರಾಹಕರನ್ನು ಗುರುತಿಸಿ ಗೌರವಿಸಲಾಯಿತು.

ಶ್ರೀ ಶಾರದಾ ಕ್ರೆಡಿಟ್ ಕೋ ಓಪರೇಟಿವ್ ಸೊಸೈಟಿಯ ಅಧ್ಯಕ್ಷ ಎಂ. ಸದಾನಂದ ರಾವ್ ಸ್ವಾಗತಿಸಿದರು. ವೇಣುಗೋಪಾಲ ರಾವ್ ನಿರ್ವಹಿಸಿದ ಈ ಕಾರ್ಯಕ್ರಮದಲ್ಲಿ ಪಡುಬಿದ್ರಿಯ ಶಾಖಾ ವ್ಯವಸ್ಥಾಪಕಿ ಸುನೀತಾ ವಂದಿಸಿದರು.

ಕೃಪೆ : ಉದಯವಾಣಿ

## ಅಮೇರಿಕ ಅಕ್ಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ಮುದ್ದಣನ ಶ್ರೀರಾಮಾಶ್ವಮೇಧಂ ಗ್ರಂಥ ಲೋಕರ್ಪಣೆ



ಗ್ರಾಮೀಣ ಪುನರುತ್ಥಾನ ಸಾಮಾಜಿಕ ಸೇವೆ ಮತ್ತು ಮುದ್ದಣ ಗ್ರಂಥಗಳ ಮರುಮುದ್ರಣ ಸೇವಾ ಕ್ಷೇತ್ರದಲ್ಲಿ ಅನುಪಮ ಸಾಧನೆ ಮಾಡಿದ ಮುದ್ದಣ ಸಂಸ್ಥೆಯ ಸ್ಥಾಪಕ ಗೌರವ ಅಧ್ಯಕ್ಷ ಶ್ರೀ ನಂದಳಿಕೆ ಬಾಲಚಂದ್ರ ಅವರಿಗೆ ಆರ್ಯಭಟ ಅಂತಾರಾಷ್ಟ್ರಿಯ ಪ್ರಶಸ್ತಿಯನ್ನು ಸರ್ವೋಚ್ಛನ್ಯಾಯಲಯದ ಮುಖ್ಯ ನ್ಯಾಯಮೂರ್ತಿ ಡಾ। ಎಂ. ಎನ್. ವೆಂಕಟಚಲಯ್ಯ ಪ್ರಶಸ್ತಿ ನೀಡಿ ಸನ್ಮಾನಿಸಿದರು. ದೂರದರ್ಶನ ಕೇಂದ್ರದ ನಿರ್ದೇಶಕ ಡಾ।ಮಹೇಶ ಜೋಶಿ, ಆರ್ಯಭಟದ ಅಧ್ಯಕ್ಷ ಡಾ।ಎಚ್.ಎಲ್.ಏನ್.ರಾವ್ ಮೊದಲಾದವರು ಉಪಸ್ಥಿತರಿದ್ದರು.

ಆಧಾರ : ಇ-ಮೇಲ್

## ಮಾರ್ಪಳ್ಳಿ ಮಂಜುನಾಥ್‌ರ ಹತ್ತೊಂಬತ್ತನೆಯ ಕೃತಿ 'ಕೊಂಡಿಕಳಚುತ್ತಿದೆ' ಪುಸ್ತಕ ಬಿಡುಗಡೆ ಮತ್ತು ಸನ್ಮಾನ



ವಿಪ್ರ ನೌಕರರ ಕ್ಷೇಮಾಭಿವೃದ್ಧಿ ಸಂಘ (ರಿ.), ಶಿವಮೊಗ್ಗ ಜಿಲ್ಲೆ ಶಿವಮೊಗ್ಗ ಹಾಗೂ ಬ್ರಾಹ್ಮಣ ಸೇವಾ ಆಶ್ರಯದಲ್ಲಿ ಗೋಪಾಳ ಶಿವಮೊಗ್ಗ ಇವರ ಸಂಯುಕ್ತ ಆಶ್ರಯದಲ್ಲಿ ಶ್ರೀ ಮಾರ್ಪಳ್ಳಿ ಆರ್. ಮಂಜುನಾಥ್ ಇವರು ಬರೆದ ಹತ್ತೊಂಬತನೆಯ ಕೃತಿ 'ಕೊಂಡಿ ಕಳಚುತಿದೆ' ಆಯ್ದ ಕವನಗಳ ಸಂಕಲನದ ಕೃತಿಯನ್ನು ತಾ.14-4-2012ರಂದು ಕರ್ನಾಟಕ ರಾಜ್ಯದ ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ಶಿವಮೊಗ್ಗ ನಗರದ ಶಾಸಕರು ಆದ ಸನ್ಮಾನ್ಯ ಶ್ರೀ ಕೆ. ಎಸ್.ಈಶ್ವರಪ್ಪ ಇವರು ನಗರದ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಸಭಾಂಗಣದಲ್ಲಿ ಬಿಡುಗಡೆ ಮಾಡಿ ಕವಿಗಳ ಬಗ್ಗೆ ಮೆಚ್ಚುಗೆಯ ಮಾತನಾಡಿದರು.

ಕವಿಗಳು ಮಕ್ಕಳಿಗಾಗಿಯೇ 15 ಕೃತಿಗಳನ್ನು ಮತ್ತು 4 ಪ್ರೌಢಕೃತಿಗಳನ್ನು ರಚಿಸಿ ಮಾಡಿರುವ ಸಾಹಿತ್ಯ ಸೇವೆ ಮೆಚ್ಚುವಂತಹದ್ದಾಗಿದ್ದು ಮಕ್ಕಳಿಗಾಗಿ ಬರೆದ ಕೃತಿಗಳನ್ನು ಎಂದೂ ಮಕ್ಕಳು ದೊಡ್ಡವರಾದರೂ ಮರೆಯುವುದಿಲ್ಲವೆಂದು ತಿಳಿಸಿ ಲೇಖಕರು ಮಾಡಿರುವ ಸಾಹಿತ್ಯ ಸೇವೆ ಸಮಾಜಕ್ಕೆ ನೀಡಿದ ಉತ್ತಮ ಕೊಡುಗೆ ಎಂದು ಶ್ಲಾಘಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಎಂ.ವಿ. ವೇದಮೂರ್ತಿ, ಜಿಲ್ಲಾಧಿಕಾರಿಗಳು ಹಾಲೀ ಬಿಡುಗಡೆಯಾಗಿರುವ 'ಕೊಂಡಿ ಕಳಚುತಿದೆ' ಪುಸಕವು ಇಂದಿನ ಪ್ರಸುತ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಬರೆದ ಕವನಗಳಾಗಿದೆಯೆಂದು ಹಾಗೂ ಸರ್ಕಾರಿ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮಂಜುನಾಥ್‌ರವರ ಹವ್ಯಾಸ ಉತ್ತಮವಾದ್ದೆಂದು ತಿಳಿಸಿ ಇವರು ಎಲ್ಲಾ ವಿಧಗಳಿಂದಲೂ ಅಭಿನಂದನೆಗೆ ಪಾತ್ರರೆಂದು ಪ್ರಶಂಸಿದರು.

ಶ್ರೀ ಮಾರ್ಪಳ್ಳಿ ಆರ್.ಮಂಜುನಾಥ್ ಇವರು ಈವರೆವಿಗೂ ಸಾಧಿಸಿದ ಸಾಹಿತ್ಯ ಸೇವೆಯನ್ನು ಗುರುತಿಸಿ ವಿಪ್ರ ನೌಕರರ ಸಂಘ ಮತ್ತು ಬ್ರಾಹ್ಮಣ ಸೇವಾ ಸಂಘವು ಲೇಖಕರನ್ನು ಅಭಿನಂದಿಸಿ ಮಾನ್ಯ ಈಶ್ವರಪ್ಪ ಶಾಸಕರು ಹಾಗೂ ಜಿಲ್ಲಾಧಿಕಾರಿಗಳಾದ ಶ್ರೀ ಎಂ.ವಿ. ವೇದಮೂರ್ತಿ ಇವರ ಉಪಸ್ಥಿತಿಯಲ್ಲಿ ಸನ್ಮಾನಿಸಿ ಅಭಿನಂದನಾ ಪತ್ರವನ್ನು ಲೇಖಕರಿಗೆ ನೀಡಿ ಗೌರವಿಸಿದರು.


ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಸೇವಾ ಸಂಘ ಬೆಂಗಳೂರಿನ ಸಂಘಟನಾ ಕಾರ್ಯದರ್ಶಿ ಮಾ.ಸ.ನಂಜುಡ ಸ್ವಾಮಿ, ಬ್ರಾಹ್ಮಣ ಸೇವಾ ಸಂಘ (ರಿ.) ಗೋಪಾಳದ ಅಧ್ಯಕ್ಷರಾದ ಹೆಚ್.ಎಸ್. ಶ್ರೀನಿವಾಸ ಮೂರ್ತಿ ಹಾಗೂ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಅಧ್ಯಕ್ಷರಾದ ಟಿ.ಎಸ್.ಅಶ್ವಥ್ ನಾರಾಯಣ ಇವರುಗಳು ಉಪಸ್ಥಿತರಿದ್ದು ಲೇಖಕರು ಬರೆದ ಕೃತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಮಾತನಾಡಿದರು.

ಸನ್ಮಾನದ ಬಗ್ಗೆ ಲೇಖಕ ಮಾರ್ಪಳ್ಳಿ ಆರ್. ಮಂಜುನಾಥ್ ಇವರು ಮಾತನಾಡಿ ತಾವು ಯಾವುದೇ ಸನ್ಮಾನ ಪ್ರಶಸ್ತಿಗಳನ್ನು ನಿರೀಕ್ಷಿಸದೆ ಎಲೆಮರೆ ಕಾಯಿಯಂತೆ ತಮ್ಮ ಸಂತೋಷಕ್ಕಾಗಿ ಸಾಹಿತ್ಯವನ್ನು ರಚಿಸಿ ಮಾಡಿರುವ ಅಳಿಲ ಸೇವೆಯನ್ನು ಗುರುತಿಸಿ ತಮ್ಮನ್ನು ಸನ್ಮಾನಿಸುತ್ತಿರುವುದಕ್ಕೆ ಕೃತಜ್ಞತೆಯನ್ನು ಸಲ್ಲಿಸಿದರು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಅಚ್ಯುತ ರಾಮ್ ವಿಪ್ರ ನೌಕರರ ಕ್ಷೇಮಾಭಿವೃದ್ಧಿ ಸಂಘ ಇವರು ವಹಿಸಿದ್ದರು. ಪ್ರಾರ್ಥನೆಯನ್ನು ಹಾಗೂ ಲೇಖಕರು ಬರೆದ ಕವನಗಳನ್ನು ಶ್ರೀಮತಿ ಗಿರಿಜಾ ಸತ್ಯನಾರಾಯಣ್ ಭದ್ರಾವತಿ ಇವರು ಸುಶ್ರಾವ್ಯವಾಗಿ ಹಾಡಿ ರಂಜಿಸಿದರು. ಸ್ವಾಗತವನ್ನು ಶ್ರೀ ಎನ್.ಎಸ್.ಪ್ರಕಾಶ್ ಗೋಪಾಳ ಇವರು ಹಾಗೂ ವಂದನಾರ್ಪಣೆಯನ್ನು ಮಾರ್ಪಳ್ಳಿ ಪ್ರಸಾದ್ ಉಪನ್ಯಾಸಕರು BIET ದಾವಣಗೆರೆ ಇವರು ಸಲ್ಲಿಸಿದರು. ಪ್ರಾಸ್ತಾವಿಕ ಭಾಷಣ ಹಾಗೂ ಕವಿಗಳ ಪರಿಚಯವನ್ನು ಶ್ರೀ ಜಿ.ಎಸ್.ಅನಂತ ಇವರು ನಿರ್ವಹಿಸಿದರು. ಈ ಸಭೆಯ ಕಾರ್ಯಕ್ರಮವನ್ನು ಪ್ರಮೋದ್ ಮಾರ್ಪಳ್ಳಿ ಇವರು ನಿರ್ವಹಿಸಿಕೊಟ್ಟರು.

**-ಅಧ್ಯಕ್ಷರು, ಬ್ರಾಹ್ಮಣ ಸೇವಾ ಸಂಘ ರಿ., ಗೋಪಾಳ, ಶಿವಮೊಗ್ಗ**

## ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಶಂಕರ ಜಯಂತಿ



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.26-4-12 ಗುರುವಾರದಂದು ಶಂಕರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಮೊದಲಿಗೆ ಶ್ರೀ ಸತ್ಯನಾರಾಯಣ ಪೂಜಾ ಸಂಕಲ್ಪ ಹಾಗೂ ಸಾಮೂಹಿಕ ಪಾರಾಯಣ ನಡೆದು ನಂತರ ವಿದ್ವಾನ್ ಶ್ರೀ ಗಣೇಶ್ ರಾಜ್‌ರವರಿಂದ ಸಂಗೀತ ಕಛೇರಿ ನಡೆಯಿತು. ತಮ್ಮ ಅಮೋಘ ಕಂಠಸಿರಿಯ ಮೂಲಕ ಹಲವು ಸಂಕೀರ್ತನೆಗಳನ್ನು ಸುಶ್ರಾವ್ಯವಾಗಿ ಹಾಡಿ ಭಕ್ತರನ್ನು ಮಂತ್ರಮುಗ್ಧರನ್ನಾಗಿಸಿದರು. ಹಿಮ್ಮೇಳದಲ್ಲಿ ವಯಲಿನ್ ವಾದಕರಾಗಿ ವಿದುಷಿ ಶ್ರೀಮತಿ ಶರ್ಮಿಳಾ ಉಡುಪಿ, ಮೃದಂಗದಲ್ಲಿ ವಿದ್ವಾನ್ ಮನೋಹರರಾವ್ ಹಾಗೂ ಖಂಜಿರದಲ್ಲಿ ಮಾಸ್ಟರ್ ಮನೋಜ್ ರಾವ್ ಮಂಗಳೂರು ಸಹಕರಿಸಿದ್ದರು. ನಂತರ ಕರ್ನಾಟಕ ಬ್ಯಾಂಕಿನ ನಿವೃತ್ತ ಮಹಾ ಪ್ರಬಂಧಕರು ಹಾಗೂ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತ ಮಂಡಳಿಯ ಸದಸ್ಯರೂ ಆದ ಶ್ರೀ ಟಿ. ಬಿ. ಮೋಹನರಾವ್‌ರವರಿಂದ ಶ್ರೀ ಆದಿ ಶಂಕರಾಚಾರ್ಯರ ಬಗ್ಗೆ ಧಾರ್ಮಿಕ ಉಪನ್ಯಾಸ ನಡೆಯಿತು. ಶ್ರೀ ಆಚಾರ್ಯರ ಜೀವನ ಪರಿಚಯ, ಅದ್ವೈತ ಸಿದ್ಧಾಂತ ಹಾಗೂ ಅವರ ಸಮಾಜಮುಖಿ ಸಾಧನೆಗಳ ಬಗ್ಗೆ ಎಳೆ ಎಳೆಯಾಗಿ ಪ್ರಸ್ತಾವಿಸಿದ ಅವರು ಆಚಾರ್ಯರು ಈಗಲೂ ವಿಶ್ವ ಮಾನ್ಯರು ಹಾಗೂ ಲೋಕೋತ್ತರ ಕೃತಿಗಳಿಂದಲೇ ಜಗದ್ಗುರುಗಳೆನಿಸಿದರೆಂದು ತಿಳಿಸಿದರು. ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿಗಳಿಂದ ಆಶೀರ್ವಚಿಸಲ್ಪಟ್ಟು ಶೃಂಗೇರಿ ಮಠದ ಮುದ್ರೆಯನ್ನು ಹೊಂದಿರುವ ಪವಿತ್ರ ಶಾಲು ಹಾಗೂ ಸ್ಮರಣಿಕೆಗಳನ್ನು ಶ್ರೀ ಗಣೇಶ್‌ರಾಜ್‌ರವರಿಗೆ ಶ್ರೀ ಬಾಲಕೃಷ್ಣ ರಾವ್ ದಂಪತಿಗಳು ಹಾಗೂ ಶ್ರೀ ಸಭಾದ ಉಪಾಧ್ಯಕ್ಷರಾದ ಡಾ। ಎ.ಪಿ.ಕೃಷ್ಣ ಹಾಗೂ ಶ್ರೀ ಟಿ.ಬಿ. ಮೋಹನ ರಾವ್‌ರವರಿಗೆ ಶ್ರೀ ಸಭಾ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಹರ್ಷಕುಮಾರ್ ಕೇದಗೆಯವರು ನೀಡಿ ಸನ್ಮಾನಿಸಿದರು. ನಂತರ ಶ್ರೀ ಆಚಾರ್ಯರರ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮ ನಡೆಸಲಾಯಿತು. ಉತ್ಸಾಹದಿಂದ ಭಾಗವಹಿಸಿದ ಸದಸ್ಯರು 20 ಪ್ರಶ್ನೆಗಳ ಪ್ರಶ್ನಾಪತ್ರಿಕೆಯನ್ನು ಪಡೆದು ಆಯ್ಕೆಯಲ್ಲಿರುವ ಉತ್ತರಗಳನ್ನು ಊಹಿಸಿ ಬಹುಮಾನ ಪಡೆಯುವ ಪ್ರಯತ್ನ ನಡೆಸಿದರು. ನಂತರ ಮಂಗಳಾರತಿ, ಪ್ರಸಾದ ವಿತರಣೆ ಹಾಗೂ ಪ್ರಸಾದ ಭೋಜನವನ್ನು ನೀಡಲಾಯಿತು. ಶ್ರೀ ಪಿ. ಶ್ರೀಕಾಂತ ರಾವ್ ಕಾರ್ಯಕ್ರಮ ನಿರ್ವಹಿಸಿದರೆ, ಶ್ರೀಮತಿ ಅರುಣ ಸೋಮಶೇಖರ, ಶ್ರೀ ನಾಗರಾಜ ಶರ್ಮ, ಶ್ರೀ ಅನಿಲ್ ರಾವ್ ಬಿ.ಎಸ್. ಕಾರ್ಯಕ್ರಮ ಸಂಯೋಜಿಸಿದರು.

ಶ್ರೀ ಕೆ. ಬಾಲಕೃಷ್ಣ ರಾವ್ ಹಾಗೂ ಶ್ರೀಮತಿ ಪುಷ್ಪಲತಾ ಬಿ.ರಾವ್‌ರವರು ಶ್ರೀ ಸತ್ಯನಾರಾಯಣ ಪೂಜೆಯನ್ನು ನಡೆಸಿ ಕೊಟ್ಟು ಹಾಗೂ ಪ್ರಸಾದ ಭೋಜನವನ್ನು ಪ್ರಾಯೋಜಿಸಿ ಶ್ರೀ ದೇವರ ಹಾಗೂ ಗುರುಗಳ ಕೃಪೆಗೆ ಪಾತ್ರರಾದರು.

**-ಎ.ಶ್ರೀಕಾಂತ ರಾವ್**

# ಪಾದೆಬೆಟ್ಟಿನ ವಿಷ್ಣುಮೂರ್ತಿ ದೇವಸ್ಥಾನದ ಬ್ರಹ್ಮಕಲಶ ನಾನು ಕಂಡಂತೆ...

-ಸ್ನೇಹಲತಾ ದಿವಾಕರ್

ಏಪ್ರಿಲ್ 21ರಂದು ಅಪರಾಹ್ನ ನಾಲ್ಕು ಗಂಟೆಗೆ ಭಕ್ತಾದಿಗಳು ಸುತ್ತುಮುತ್ತಲಿನ ಮನೆಯವರು, ಪೆಡುಬಿದ್ರಿಯ ನಂದೆಗೋಕುಲ ಮನೆಯಲ್ಲಿ ಸೇರಿದ್ದರು. ಬಂದವರಿಗೆ ಕಾಫಿ, ಚಹಾ ಉಪಚಾರ. ಸ್ವಯಂ ಸೇವಕರು ಹೊರೆ ಕಾಣಿಕೆ, ಮೆರವಣಿಗೆ ಅಣಿ ಮಾಡುತ್ತಿದ್ದರು. ಸುಮಾರು ಐದು ಗಂಟೆಗೆ ಅಲಂಕೃತಗೊಂಡ ಮಹಾಗಣಪತಿ ದೇವರ ಬಿಂಬ, ಪ್ರಭಾವಳಿ, ಪಾದೆಬೆಟ್ಟು ಗ್ರಾಮದ ಮತ್ತು ಹತ್ತು ಸಮಸರ ಹೊರೆಕಾಣಿಕೆ, ವ್ಯಾನ್, ಜೀಪ್, ಕಾರುಗಳೆಲ್ಲಿ ಕಾಂಚೀನಗರ ವಿಷ್ಣುಮೂರ್ತಿ ದ್ವಾರದಲ್ಲಿ ತಯಾರಾಗಿ ನಿಂತಿತು. ಮುಖ್ಯಮಾರ್ಗದಿಂದ ತಿರುಗಿ ದೇವಸ್ಥಾನಕ್ಕೆ ಸುಮಾರು ಒಂದುವರೆ ಕಿ.ಮೀ. ಇದೆ. ಮೆರವಣಿಗೆಯ ಉದ್ಘಾಟನೆಯನ್ನು ಪಾದೆಬೆಟ್ಟು ಸುಬ್ಬರಾವ್ ದಂಪತಿಗಳ ಮುಂದಾಳತ್ವದಲ್ಲಿ ಶ್ರೀಮತಿ ಸಂಧ್ಯಾ ಬಸೀಕರ್ ಇವರು ನೆರವೇರಿಸಿದರು. ಸಿಡಿಮದ್ದುಗಳ ಅಬ್ಬರ, ಕಲಶ ಹೊತ್ತ ಸುಮಂಗಳೆಯರು, ವಿವಿಧ ಡೋಲು ವಾದ್ಯಗಳೊಂದಿಗೆ ನೂರಿನ್ನೂರು ಮಹನೀಯರು ನಡೆದುಕೊಂಡು ಹೋಗುವುದರೊಂದಿಗೆ ಮೆರವಣಿಗೆ ಮುಂದುವರಿದು ದೇವಸ್ಥಾನ ತಲಪಿತು. ಪೂಜೆ, ಆರತಿ, ಪ್ರಸಾದಗಳಾದ ಮೇಲೆ ರುಚಿಯಾದ ಉಪಹಾರವಿತ್ತು.

ಬೆಳಗ್ಗೆ ಸಂಜೆ ಎಲ್ಲಾ ರೀತಿಯ ವೈದಿಕ ಕಾರ್ಯಕ್ರಮಗಳು ನಡೆಯುತ್ತಿದ್ದುವು. ಬೇರೆ ಬೇರೆ ದಿನಗಳಲ್ಲಿ ಪಡುಬಿದ್ರೆ ಸಂಘದವರಿಂದ ಭಜನೆ, ಶ್ಲೋಕಗಳು ಇದ್ದುವು. ಸುತ್ತಲಿನ ಮಹಿಳೆಯರು ಭಕ್ತಿಯಿಂದ ಹಾಡುತ್ತಿದ್ದರು.

ಮೂರು ನಾಲ್ಕು ದಿನಗಳು ಎಲ್ಲಾ ರೀತಿಯ ವೈದಿಕ ಶುದ್ಧೀಕರಣ, ಗಣಪತಿ ಹೋಮ, ಮೃತ್ಯುಂಜಯ ಹೋಮ, ವಾಸ್ತು ಪೂಜೆ, ನವಗ್ರಹ ಹೋಮ, ಕಲಶ ಸ್ಥಾಪನೆ, ಗಣಪತಿ ದೇವರ ಪ್ರತಿಷ್ಠೆ, ಶಾಸ್ತಾವು ದೇವರ ಪ್ರತಿಷ್ಠೆ, ಶಾಂತಿ ಹೋಮಗಳೆಲ್ಲಾ ನೆರವೇರಿದುವು. ಕೊನೆಯ ದಿನ ಗುರುವಾರ ಪ್ರಾತಃ ಕಾಲ ವಿಷ್ಣುಮೂರ್ತಿ ದೇವರ ಬ್ರಹ್ಮಕುಂಭಾಭಿಷೇಕ, ವಿಷ್ಣು ಸಹಸ್ರನಾಮ ಹವನ, ದುರ್ಗಾ ಹವನ, ಮಹಾಪೂಜೆ, ಅನ್ನಸಂತರ್ಪಣೆ ನಡೆಯಿತು. ಸುತ್ತಲಿನ ಗದ್ದೆ, ಮರಗಳು, ನಾಗಬನದೊಂದಿಗೆ ಪ್ರಕೃತಿ ಸೌಂದರ್ಯವೂ ಸುಂದರವಾಗಿತ್ತು. ಹೂಮಳೆಯೂ ಬಂದು ತಂಪಾದ ಗಾಳಿ ಬೀಸುತ್ತಿತ್ತು. ಮಧ್ಯಾಹ್ನ 11-30ಕ್ಕೆ ಶ್ರೀಮತಿ ವಾಣಿಯವರು ಮತ್ತವರ ಶಿಷ್ಯರಿಂದ ಸಂಗೀತ ಕಛೇರಿ, ವಾಗೀಶ ಶಾಸ್ತ್ರಿಯವರಿಗೆ ಸನ್ಮಾನ ಮತ್ತು ಅವರಿಂದಲೇ 'ಅನುಗ್ರಹ ಭಾಷಣ'. ಅವರು ಶಂಕರಾಚಾರ್ಯರನ್ನು ನೆನಪಿಸುತ್ತಾ ಶ್ಲೋಕಗಳ ಮೂಲಕ ಜನಸಾಮಾನ್ಯರಿಗೆ ಅರ್ಥ ವಾಗುವಂತೆ ವಿವರಿಸಿದರು. ಪ್ರಸಾದ ಭೋಜನ ದೊಂದಿಗೆ ಮಧ್ಯಾಹ್ನ ಕಾರ್ಯಕ್ರಮ ಮುಗಿಯಿತು. ರಾತ್ರಿಗೆ ವಿಶೇಷ ಹೂವಿನ ಪೂಜೆ ಇತ್ತು. ಊರಿನವರ ಬಾಯಿಯಲ್ಲಿ "ಬ್ರಹ್ಮ ವಿಷ್ಣು ಮಹೇಶ್ವರರಂತೆ" ಇವರಿಲ್ಲದಿದ್ದರೆ ಈ ಕೆಲಸವಾಗುತ್ತಿರಲಿಲ್ಲವೆಂದು ಪದೇ ಪದೇ ಕೇಳಿ ಬರುತ್ತಿತ್ತು. ಬಹುಶಃ ಪಡುಬಿದ್ರೆ ದಿವಾಕರ್, ಕರುಣ್‌ಬೆಳ್ಳೆ ಮತ್ತು ಸುಧಾಕರ್ ಇರಬಹುದು.

ಹೀಗಿತ್ತು ನಾ ಕಂಡ, ನೋಡಿದ ಕೇಳಿದ ಬ್ರಹ್ಮಕಲಶದ ಕೆಲವು ನೆನಪುಗಳು.

# ಕಾರ್ಕಳ : ಶ್ರೀರಾಮಧಾಮ ಧ್ಯಾನಮಂದಿರಲ್ಲಿ ಚತುರ್ಥ ವಾರ್ಷಿಕ ಪ್ರತಿಷ್ಠಾಪನಾ ಸಮಾರಂಭ

ಕಾರ್ಕಳದ 'ಶ್ರೀರಾಮಧಾಮ' ಧ್ಯಾನ ಮಂದಿರದಲ್ಲಿ ತಾ.31-03-2012ರಂದು ಚತುರ್ಥ ವಾರ್ಷಿಕ ಪ್ರತಿಷ್ಠಾಪನಾ ಸಮಾರಂಭವು ಕೋಲ್ಲೆ ಕುಟುಂಬಸ್ಥರಿಂದ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಆ ದಿನ ಬೆಳಗ್ಗೆಯಿಂದಲೇ ಪಾವಂಜೆಯಲ್ಲಿರುವ ಕಬ್ಬಿನಾಲೆ ವೇದಮೂರ್ತಿ ದೇವರಾಜ ಹೆಬ್ಬಾರರ ಪೌರೋಹಿತ್ಯ ಸಾರಥ್ಯದಲ್ಲಿ ಪುರೋಹಿತರುಗಳಾದ ಹೆಜಮಾಡಿ ಕೃಷ್ಣ ಭಟ್ ಮತ್ತು ಸುಬ್ರಹ್ಮಣ್ಯ ಭಟ್, ಪಾವಂಜೆಯವರು ಶುದ್ಧ ಪುಣ್ಯಾರ್ಚನೆ, ಗಣಹೋಮ ಹಾಗೂ ಏಕಾದಶ ರುದ್ರಾಭಿಷೇಕ ಮಾಡಿ, ಮಧ್ಯಾಹ್ನ ಶ್ರೀರಾಮನಿಗೆ ಸಹಸ್ರಾರ್ಚನೆ ಸಹಿತ ಮಹಾಪೂಜೆ ನೆರವೇರಿಸಿದರು. ಆನಂತರ ಆಮಂತ್ರಿತ ಬಂಧು-ಬಳಗ ಹಾಗೂ ನೆರೆಕರೆಯವರು ಪ್ರಸಾದ ಭೋಜನ ಸ್ವೀಕರಿಸಿದರು.



ಅಪರಾಹ್ನ ಗಂಟೆ 3ರಿಂದ 4.30ರ ತನಕ "ಶ್ರೀಶಾರದಾ ಭಜನಾ ಮಂಡಳಿ" ಅನಂತಶಯನ, ಕಾರ್ಕಳದವರಿಂದ ಸುಶ್ರಾವ್ಯ ಭಜನಾ ಕಾರ್ಯಕ್ರಮ ನಡೆಯಿತು. ಅದೇ ದಿನ ರಾತ್ರಿ ಸಪ್ತಶತಿ ಪಾರಾಯಣ ಸಹಿತ ದುರ್ಗಾ ನಮಸ್ಕಾರ ಪೂಜೆಯನ್ನು ನೆರವೇರಿಸಿ ಕೋಲ್ಲೆ ಕುಟುಂಬಸ್ಥರನ್ನು ಮಂತ್ರಾಕ್ಷತೆಯೊಂದಿಗೆ ಪುರೋಹಿತರು ಆಶೀರ್ವಚಿಸಿದರು.

ತಾ.01-04-2012ರಂದು 'ಶ್ರೀರಾಮ ನವಮಿ' ದಿವಸ ಬೆಳಗ್ಗೆ ಪುಣ್ಯಾಹದೊಂದಿಗೆ, ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಂತೆ, ಪುರೋಹಿತ ಬೆಳ್ಳೆ ಅರವಿಂದ ಶರ್ಮರವರು 'ರಾಮರತಾರಕ ಹೋಮ'ವನ್ನು ಪುರೋಹಿತರುಗಳಾದ ಸುಬ್ರಹ್ಮಣ್ಯ ಭಟ್ ಮತ್ತು ಕೃಷ್ಣರಾಜ ಭಟ್‌ರವರ ಸಹಯೋಗದೊಂದಿಗೆ ಕ್ರಮಬದ್ಧವಾಗಿ ನೆರವೇರಿಸಿದರು. ತದನಂತರ ಶ್ರೀ ಸುಬ್ರಹ್ಮಣ್ಯ ಭಟ್‌ರವರ ನೇತೃತ್ವದಲ್ಲಿ 'ಏಕಾದಶ ರುದ್ರಾಭಿಷೇಕ' ನಡೆಯಿತು. ಮಧ್ಯಾಹ್ನಕ್ಕೆ 'ಶ್ರೀರಾಮ'ನಿಗೆ ಪಂಚಾಮೃತ ಅಭಿಷೇಕ, ಸಹಸ್ರನಾಮ ಅರ್ಚನೆ ಹಾಗೂ ಮಹಾಪೂಜೆಯನ್ನು ಶ್ರೀ ಕೃಷ್ಣರಾಜ ಭಟ್‌ರವರು ಯಶಸ್ವಿಯಾಗಿ ನಡೆಸಿಕೊಟ್ಟರು. ತದನಂತರ ಬಂಧು ಬಳಗ ಹಾಗೂ ಭಾಗಿಗಳಾದ ನೆರಕರೆಯವರಿಗೆ ಪ್ರಸಾದ ಭೋಜನ ಏರ್ಪಡಿಸಲಾಗಿತ್ತು. 'ಶ್ರೀರಾಮಧಾಮ' ಧ್ಯಾನಮಂದಿರದ ಉಸ್ತುವಾರಿ ಶ್ರೀ ಶಶಿಧರ ಕೋಲ್ಲೆಯವರು ತಮ್ಮ ಚಂದ್ರಶೇಖರನ ಸಹಕಾರದೊಂದಿಗೆ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿ ಕೊಟ್ಟರು. ಕುಟುಂಬದ ಹಿರಿಯರಾದ ಗೋಪಾಲಕೃಷ್ಣ ಕೋಲ್ಲೆ ದಂಪತಿಗಳು ಕಿರಿಯರನ್ನು ಆಶೀರ್ವಚಿಸಿದರು.

ವರದಿ : **ಜಿ.ಕೆ.ಕೋಲ್ವೆ, ಕಡಬ**

## ವೈವಾಹಿಕ ಜೀವನದ ವಜ್ರ ಮಹೋತ್ಸವ ಆಚರಣೆ

ಪ್ರೊ। ಶಿರಿಯ ರಾಧಾಕೃಷ್ಣ ಜೋಶಿ ಮತ್ತು ಶ್ರೀಮತಿ ಮಹಾಲಕ್ಷ್ಮೀ ದಂಪತಿಗಳು ತಮ್ಮ ವೈವಾಹಿಕ ಜೀವನದ 60 ಸಂವತ್ಸರಗಳನ್ನು ಪೂರೈಸಿದ ಪ್ರಯುಕ್ತ ತಾ.29-04-2012ರಂದು ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಿಯ ಸನ್ನಿಧಿಯಲ್ಲಿ ಗಣಹೋಮ ಮತ್ತು ಶ್ರೀ ಸತ್ಯ ನಾರಾಯಣಪೂಜೆಯನ್ನು ತಮ್ಮ ಬಂಧು ಬಾಂಧವರ ಕೂಡುವಿಕೆಯಿಂದ ನೆರವೇರಿಸಿದರು.



ಎಮ್. ದೇವಾನಂದ್ ಭಟ್
Cell : 9845644556
9483913344

ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು


## ಗೃಹಪ್ರವೇಶ

ಶ್ರೀಮತಿ ವಿದ್ಯಾ ಮತ್ತು ಶ್ರೀ ಮೋಹನ್ ರಾವ್ ಇವರು ಕರಂಬಳ್ಳಿಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ 'ಕೃಷ್ಣ' ಇದರ ಪ್ರವೇಶೋತ್ಸವವನ್ನು ತಾ.24-04-2012ರಂದು ನೆರವೇರಿಸಿದರು.

★★★★

ಶ್ರೀಮತಿ ಮತ್ತು ಶ್ರೀ ಸುಬ್ಬರಾವ್ ಇವರು ಹಿರಿಯಡ್ಕ ಆಳುಗ್ಗೆಲು ಇಲ್ಲಿ ನೂತನವಾಗಿ ನಿರ್ಮಿಸಿದ ಗೃಹ 'ರಾಜಶ್ರೀ' ಇದರ ಪ್ರವೇಶೋತ್ಸವವನ್ನು ತಾ.26-04-2012ರಂದು ನೆರವೇರಿಸಿದರು.

★★★★

ಶ್ರೀಮತಿ ಜ್ಯೋತಿ ಮತ್ತು ಶ್ರೀ ಮಂಜುನಾಥ ಹೆಬ್ಬಾರ್ ಇವರು ಕುಕ್ಕಿಕಟ್ಟೆ ಕಲ್ಯಾಣನಗರದಲ್ಲಿ ನೂತನವಾಗಿ ನಿರ್ಮಿಸಿದ ಗೃಹ 'ವೆಂಕಟೇಶ ನಿವಾಸ' ಇದರ ಪ್ರವೇಶೋತ್ಸವವನ್ನು ತಾ.26-4-2012ರಂದು ನೆರವೇರಿಸಿದರು.

★★★★

ಶ್ರೀ ಪದ್ಮನಾಭ ಹೆಬ್ಬಾರ (ಶಿವ ಹೆಬ್ಬಾರ್) ಇವರು ಉಡುಪಿ ಚಿಟ್ಪಾಡಿಯಲ್ಲಿ ನೂತನವಾಗಿ ನಿರ್ಮಿಸಿದ ಗೃಹ 'ಅನಂತ ಕೃಪಾ' ಇದರ ಪ್ರವೇಶೋತ್ಸವವನ್ನು ತಾ.28-04-2012ರಂದು ನೆರವೇರಿಸಿದರು.

★★★★

ಶ್ರೀಮತಿ ವತ್ಸಲಾ ರಾವ್ ಮತ್ತು ಶ್ರೀ ಚಂದ್ರಶೇಖರ್ ರಾವ್ ಇವರು ಉಡುಪಿ ಕುಕ್ಕಿಕಟ್ಟೆ ಮಂಚಿ ಮೂಲಸ್ಥಾನದ ಬಳಿ ನೂತನವಾಗಿ ನಿರ್ಮಿಸಿದ ಗೃಹ 'ಗೀತಾ ನಿಲಯ' ಇದರ ಪ್ರವೇಶೋತ್ಸವವನ್ನು ತಾ.29-04-2012 ರಂದು ನೆರವೇರಿಸಿದರು.

★★★★

ದಿ। ಭವಾನಿ ಶಂಕರರಾಯರ ದ್ವಿತೀಯ ಪುತ್ರ ಸುದರ್ಶನ ಪ್ರಸಾದ್ ಇವರು ಪಡುಬಿದ್ರಿಯ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಬಳಿ ನೂತನವಾಗಿ ನಿರ್ಮಿಸಿದ ಗೃಹ 'ಶಂಕರ' ಇದರ ಪ್ರವೇಶೋತ್ಸವವನ್ನು ತಾ.29-04-2012ರಂದು ನೆರವೇರಿಸಿದರು.

★★★★

ಶ್ರೀಮತಿ ವಸಂತಿ ಮತ್ತು ಶ್ರೀ ಬನ್ನಂಜೆ ಗುರುರಾಜ ರಾವ್ ಇವರು ಉಡುಪಿ ಗುಂಡಿಬೈಲು ನಾಗಬನದ ಬಳಿ ನೂತನವಾಗಿ ನಿರ್ಮಿಸಿದ "ಸುದರ್ಶನ" ಇದರ ಮಹಡಿಯ ಪ್ರವೇಶೋತ್ಸವವನ್ನು ತಾ.25-04-2012ರಂದು ನೆರವೇರಿಸಿದರು.

★★★★

ಶ್ರೀಮತಿ ಸರೋಜ ಬಿ.ರಾವ್ ಮತ್ತು ಶ್ರೀ ಕೆ. ಕೃಷ್ಣರಾವ್ ಇವರು ಹೆರ್ಗ ಗೋಳಿಕಟ್ಟೆ ಬಳಿ ನೂತನವಾಗಿ ನಿರ್ಮಿಸಿದ ಗೃಹದ ಪ್ರವೇಶೋತ್ಸವ ವನ್ನು ತಾ.26-04-2012ರಂದು ನೆರವೇರಿಸಿದರು.

## ಸೀಮಂತೋನ್ನಯನ

ತಾ.04-05-2012ನೇ ಶುಕ್ರವಾರದಂದು ಶ್ರೀಮತಿ ಪ್ರಸನ್ನ ಕುಮಾರಿ ಮತ್ತು ಕರ್ವಾಲು ಅನಂತ ಪಟ್ಟಾಭಿರಾಯರ ಸೊಸೆ ಶ್ರೀಮತಿ ರಶ್ಮಿ (ಕೆ.ಆದರ್ಶಕುಮಾರ್ ಇವರ ಧರ್ಮಪತ್ನಿ ಹಾಗೂ ಇನ್ನಾ ಕಲ್ಲಟ್ಟ ಶೇಷಾದ್ರಿ ರಾವ್ ಶ್ರೀಮತಿ ಜಲಜಾಕ್ಷಿ ಇವರ ಮಗಳು) ಇವರ ಸೀಮಂತೋನ್ನಯನವು ಕರ್ವಾಲು ಅನಂತ ಪದ್ಮನಾಭ ನಿಲಯದಲ್ಲಿ ನೆರವೇರಿತು. ನವಶಕ್ತಿ ಮಹಿಳಾ ಮಂಡಳಿ, ಪಡುಬಿದ್ರಿ, ಇದರ ಸದಸ್ಯೆಯರಿಂದ ಭಜನಾ ಕಾರ್ಯಕ್ರಮ ಜರಗಿತು. ಹೆಸರಾಂತ ಗಾಯಕಿ ಕೆ.ಅನಂತ ಪಟ್ಟಾಭಿರಾಯರ ಶಿಷ್ಯೆ ಶ್ರೀಮತಿ ಅಂಬಿಕಾ ಬಾಲಕೃಷ್ಣರವರಿಂದ ಸಂಗೀತ ಕಾರ್ಯಕ್ರಮ ಜರಗಿತು. ಶ್ರೀಮತಿ ಡಾ। ಸುಶೀಲಾ ಪಿ.ಉಪಾಧ್ಯಾಯ ಇವರು ಭಾಗವಹಿಸಿ ಕಾರ್ಯಕ್ರಮವನ್ನು ಸಂಪನ್ನಗೊಳಿಸಿದರು. ಕರ್ವಾಲು ಶ್ರೀ ಮಹಾವಿಷ್ಣು ಮೂರ್ತಿ ದೇವರಿಗೆ ತಾ.29-4-2012ರಂದು ರಂಗಪೂಜೆ ಸೇವೆ ಸಲ್ಲಿಸುವುದರೊಂದಿಗೆ ಶ್ರೀದೇವರ ಅನುಗ್ರಹದಿಂದ ಧಾರ್ಮಿಕ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಅನ್ನದಾನ ನಿರ್ವಿಘ್ನವಾಗಿ ನೆರವೇರಿತು.

## ಉಪನಯನ

**ಚಿ। ಕೃಷ್ಣಪ್ರಸಾದ್**

ಉಚ್ಚಿಲ ಶ್ರೀ ಗಣೇಶ್ ಶ್ಯಾನುಭಾಗ್ ಹಾಗೂ ಶ್ರೀಮತಿ ವೀಣಾ ಶ್ಯಾನುಭಾಗ್‌ರ ಪುತ್ರ ಚಿ। ಕೃಷ್ಣ ಪ್ರಸಾದ್‌ನ ಬ್ರಹ್ಮೋಪದೇಶವು ತಾ.25-4-2012 ರಂದು ತಮ್ಮ ಉಚ್ಚಿಲದಲ್ಲಿರುವ ಸ್ವಗೃಹ ಶಿವಕೃಪಾ ದಲ್ಲಿ ನೆರವೇರಿತು.

★★★★

**ಚಿ। ಸುಮುಖ**

ಶ್ರೀಮತಿ ಸಪ್ನಾ ಮತ್ತು ಶ್ರೀ ಕೃಷ್ಣಪ್ರಸಾದ್ ಇವರ ಪುತ್ರ ಚಿ। ಸುಮುಖನ ಬ್ರಹ್ಮೋಪದೇಶವು ತಾ.25-4-2012ರಂದು ಪೆರ್ಡೂರು ಶ್ರೀ ರಾಮ ಮಂದಿರದಲ್ಲಿ ನೆರವೇರಿತು.

★★★★

**ಚಿ। ಆಶ್ಲೇಷ್**

ಕಟಪಾಡಿ ಮೂಡಬೆಟ್ಟು ಶ್ರೀಮತಿ ಅನುಸೂಯ ಮತ್ತು ಶ್ರೀ ಪದ್ಮಾನಂದ ರಾಯರ ಪುತ್ರ ಚಿ। ಆಶ್ಲೇಷ್‌ನ ಬ್ರಹ್ಮೋಪದೇಶವು ತಾ.26-4-2012ರಂದು ಕಟಪಾಡಿ ಮೂಡಬೆಟ್ಟು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನೆರವೇರಿತು.

★★★★

**ಚಿ। ಶ್ರೀಕೃಷ್ಣ**

ಕಬ್ಬಿನಾಲೆ ಖಜನೆ ಶ್ರೀಮತಿ ಮತ್ತು ಶ್ರೀ ಶ್ರೀಧರ ಹೆಬ್ಬಾರರ ಪುತ್ರ ಚಿ। ಶ್ರೀಕೃಷ್ಣನ ಬ್ರಹ್ಮೋಪದೇಶವು ತಾ.26-4-2012 ರಂದು ಕಬ್ಬಿನಾಲೆ ಖಜನೆಯ ಸ್ವಗೃಹದಲ್ಲಿ ನೆರವೇರಿತು.

★★★★

**ಚಿ। ರಿಷಭ**

ಶ್ರೀಮತಿ ಪದ್ಮಶ್ರೀ ಮತ್ತು ಶ್ರೀ ಸುಧೀರ್ ಕುಮಾರ್‌ರ ಪುತ್ರ ಚಿ। ರಿಷಭನ ಬ್ರಹ್ಮೋಪದೇಶವು ತಾ.26-4-2012ರಂದು ಪಡುಬಿದ್ರಿ ಬ್ರಹ್ಮಸ್ಥಾನದ ಶ್ರೀ ಖಡ್ಗೇಶ್ವರಿ ಜ್ಞಾನಮಂದಿರದಲ್ಲಿ ನೆರವೇರಿತು.

★★★★

**ಚಿ। ಪ್ರಥಮ**

ಶ್ರೀಮತಿ ಶಾಂತಿ ಮತ್ತು ಶ್ರೀ ಟಿ. ದಿನೇಶ್ ರಾವ್ ಇವರ ಪುತ್ರ ಚಿ। ಪ್ರಥಮನ ಬ್ರಹ್ಮೋಪದೇಶ ತಾ.15-4-2012ರಂದು ಮಂಗಳೂರಿನ ಡೊಂಗರಕೇರಿ ವೆಂಕಟರಮಣ ದೇವಸ್ಥಾನದ ಶ್ರೀ ವೆಂಕಟಾಚಲಪತಿ ಸಭಾಗೃಹದಲ್ಲಿ ನೆರವೇರಿತು.

## ಶುಭ ಜನನ

ಅಬುಧಾಬಿಯಲ್ಲಿ ವಾಸ್ತವ್ಯದಲ್ಲಿರುವ ಪಡುಬಿದ್ರಿ ನಿತಿನ್‌ರಾವ್ ಹಾಗೂ ಡಾ। ಭವಾನಿ ದಂಪತಿಗಳಿಗೆ ತಾ.12-4-2012ರಂದು ಮಂಗಳೂರಿನಲ್ಲಿ ಹೆಣ್ಣು ಮಗುವಿನ ಜನನ.

★★★ ★★★

ಪಾದೆಬೆಟ್ಟು ಗಣೇಶ ರಾವ್ ಮತ್ತು ಸುಶೀಲಾ ದಂಪತಿಯವರ ಪುತ್ರ ಅಮೇರಿಕಾದ ಡಲ್ಲಾಸ್ ನಲ್ಲಿರುವ ಪಾದೆಬೆಟ್ಟು ಸುಬ್ರಹ್ಮಣ್ಯ ಹಾಗೂ ಚಂದ್ರಿಕಾ ದಂಪತಿಗಳಿಗೆ ತಾ.24-4-2012ರಂದು ಗಂಡು ಮಗುವಿನ ಜನನ.

★★★ ★★★

ಶ್ರೀ ಪಿ.ರಾಮಚಂದ್ರ ಕೊಠಾರಿ ಪರ್ಕಳ ಇವರ ಪುತ್ರ ಸುದೀಪ್ ಸಿಂಗಾಪುರ ಮತ್ತು ಅನಿತಾ ಬೆಂಗಳೂರು ಇವರಿಗೆ ತಾ.01-05-2012ರಂದು ಹೆಣ್ಣು ಮಗುವಿನ ಜನನ.

## ಎಸ್.ಎಸ್.ಎಲ್‌ಸಿಯಲ್ಲಿ ರಾಜ್ಯದಲ್ಲೇ ದ್ವಿತೀಯ ಸ್ಥಾನಗಳಿಸಿದ ಕು। ಪಲ್ಲವಿ

ಸುರತ್ಕಲ್‌ನಲ್ಲಿ ವಾಸವಾಗಿರುವ ಕಾಪುವಿನ ಕೆ. ಮಂಜುನಾಥ ರಾವ್ ಮತ್ತು ಶ್ರೀಮತಿ ಭುವನೇಶ್ವರಿ ಇವರ ಮಗಳು ಕು। ಪಲ್ಲವಿ ಎಸ್‌ಎಸ್‌ಎಲ್‌ಸಿ-2012ರ ಪರೀಕ್ಷೆಯಲ್ಲಿ ರಾಜ್ಯಕ್ಕೆ 2ನೇ ಸ್ಥಾನ (625ರಲ್ಲಿ 621)ವನ್ನು ಗಳಿಸಿರುತ್ತಾಳೆ. ಇವಳು ವಿದ್ಯಾದಾಯಿನಿ ಹೈಸ್ಕೂಲ್ ಸುರತ್ಕಲ್‌ನ ವಿದ್ಯಾರ್ಥಿನಿ. ಈಕೆಯ ಈ ಸಾಧನೆಗೆ ಶ್ರೀಶಾರದಾ ಹರ್ಷವ್ಯಕ್ತಪಡಿಸುತ್ತದೆ.

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಸುಮಿತ್ರಾ ಶ್ಯಾನುಭಾಗ್ ಹಾಗೂ ಶ್ರೀ ಸುಬ್ಬರಾವ್ ಶ್ಯಾನುಭಾಗ್ ಉಚ್ಚಿಲ ಇವರ ಪುತ್ರಿ **ಸೌಮ್ಯಶ್ರೀ (ಪಾರ್ವತಿ)** ಹಾಗೂ ಕಂಬದಕೋಣೆ ಶ್ರೀ ಶ್ರೀಧರ್‌ರಾವ್ ಮತ್ತು ಶ್ರೀಮತಿ ಸಾವಿತ್ರಿ ರಾವ್‌ರವರ ಪುತ್ರ **ವಿಜೇತ** ಇವರ ವಿವಾಹವು ದಿನಾಂಕ 16-04-2012ರಂದು ಏರ್ಮಾಳು ಶ್ರೀ ಜನಾರ್ದನ ದೇವಸ್ಥಾನದ ಜನಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಶ್ರೀಮತಿ ಶೋಭಾ ಮತ್ತು ಶ್ರೀ ಅಮೃತ ಕುಮಾರ್ ಬೆಳ್ಳೆ ಇವರ ಪುತ್ರ **ರೋಹನ್** ಹಾಗೂ ಶ್ರೀಮತಿ ಪ್ರಜ್ವಲ ಮತ್ತು ಶ್ರೀ ಉಮೇಶ್ ರಾವ್ ಇವರ ಪುತ್ರಿ **ಅನುಷಾ** ಇವರ ವಿವಾಹವು ದಿನಾಂಕ 16-04-2012ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

## ವೈವಾಹಿಕ ಜೀವನದ ಸುವರ್ಣಮಹೋತ್ಸವ ಆಚರಣೆ

ಶ್ರೀ ಸಾಂತೂರು ದಿವಾಕರ ರಾಯರು ಮತ್ತು ಶ್ರೀಮತಿ ಸ್ನೇಹಲತಾ ಇವರು ತಮ್ಮ ವೈವಾಹಿಕ ಜೀವನದ ಐವತ್ತು ಸಂವತ್ಸರಗಳನ್ನು ಪೂರೈಸುವ ಸಲುವಾಗಿ 'ಸುಬ್ರಹ್ಮಣ್ಯ ಸಭಾಭವನ' ಮಂಗಳೂರಿನಲ್ಲಿ ಗಣಹೋಮ, ಸತ್ಯನಾರಾಯಣ ಪೂಜೆ ನೆರವೇರಿಸಿದರು. ಅದೇ ದಿನ ಯುಗಾದಿಯಾದ ಕಾರಣ ಯುಗಾದಿಯ ಶುಭಾಶಯಗಳೊಂದಿಗೆ ಪೂಜೆ, ಪ್ರಸಾದ, ಹಾಡುಗಳು, ಭಜನೆ ಇದ್ದುವು. ಸತ್ಸಂಗ, ಕ್ಲೇರನೆಟ್ ವಾದನ (ಶಾರದ ಮಂಚಿ ಇವರಿಂದ) ಮತ್ತು ಹಲವರಿಂದ ಶಾಸ್ತ್ರೀಯ ಸಂಗೀತ, ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮ ಚೆನ್ನಾಗಿ ನಡೆಯಿತು.

## ನಿಧನ

### ನಾಗವೇಣಿ

ಬೆಳ್ಪರ್ಪಾಡಿ ದಿ| ಭುಜಂಗ ರಾವ್ ಇವರ ಧರ್ಮಪತ್ನಿ ನಾಗವೇಣಿ ಇವರು ತಾ.1-5-2012 ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು 96 ವರ್ಷ ಪ್ರಾಯದವರಾಗಿದ್ದು, ಎರಡು ಗಂಡು ಮಕ್ಕಳು ಮತ್ತು ಮೂವರು ಹೆಣ್ಣು ಮಕ್ಕಳು ಹಾಗೂ ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

★★★ ★★★

### ಮಹಾಲಕ್ಷ್ಮೀ ಹೆಬ್ಬಾರ್

ಮರೂರು ದಿ| ಶ್ಯಾಮ ಹೆಬ್ಬಾರರ ಧರ್ಮಪತ್ನಿ ಶ್ರೀಮತಿ ಮಹಾಲಕ್ಷ್ಮೀ ಹೆಬ್ಬಾರ್ ಅಲ್ಪಕಾಲದ ಅಸೌಖ್ಯದಿಂದ ತಾ.06-04-2012ರಂದು ಮರೂರಿನ ಸ್ವಗೃಹದಲ್ಲಿ ನಿಧನರಾಗಿರುತ್ತಾರೆ. ಅವರು ಓರ್ವ ಪುತ್ರ ಹಾಗೂ 7 ಮಂದಿ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಕುಟುಂಬವರ್ಗದವರನ್ನು ಅಗಲಿರುತ್ತಾರೆ.

★★★ ★★★

### ಸುಧಾಕರ ರಾವ್

ಒಳಕಾಡು ಉಡುಪಿಯಲ್ಲಿ ವಾಸ್ತವ್ಯವಿದ್ದ ಶ್ರೀ ಕೆ. ಸುಧಾಕರ ರಾವ್ ಇವರು ತಾ.2-5-2012ರಂದು ನಿಧನರಾಗಿರುತ್ತಾರೆ. ಇವರು ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

## ವೃಷಭ ಮಾಸದ ವಿಶೇಷ ದಿನಗಳು

| | |
|---|---|
| 16-05-2012 | ಏಕಾದಶೀ |
| 20-05-2012 | ಅಮಾವಾಸ್ಯೆ |
| 31-05-2012 | ಭಾಗೀರಥಿ ಜನ್ಮದಿನ |
| 01-06-2012 | ಏಕಾದಶೀ |
| 04-06-2012 | ಹುಣ್ಣಿಮೆ |
| 07-06-2012 | ಸಂಕಷ್ಟಹರ ಚೌತಿ |
| 14-06-2012 | ಮಿಥುನ ಸಂಕ್ರಮಣ |
| 15-06-2012 | ಏಕಾದಶೀ |

## ವಿದೇಶ ಪ್ರಯಾಣ



ಪಡುಬಿದ್ರಿ ಶ್ರೀ ಪಿ.ಡಿ.ಜಗದೀಶ ರಾವ್ ಮತ್ತು ಶ್ರೀಮತಿ ಉಮಾ ಜಗದೀಶ ರಾವ್ ಇವರು ತಾ.29-4-12 ರಂದು ಅಮೇರಿಕದ ಡಾಲಸ್‌ನಲ್ಲಿರುವ ತಮ್ಮ ಮಗಳು ಹಾಗೂ ಅಳಿಯನಲ್ಲಿಗೆ (ಚಂದ್ರಿಕಾ ಹಾಗೂ ಸುಬ್ರಹ್ಮಣ್ಯ ಪಾದೆಬೆಟ್ಟು) 5 ತಿಂಗಳ ವಾಸ್ತವ್ಯಕ್ಕಾಗಿ ತೆರಳಿದ್ದಾರೆ. ಇವರಿಗೆ ಶ್ರೀಶಾರದಾ ಶುಭಾಶಯಗಳು.

★★★ ★★★

ಮುಂಬೈ ಮುಲುಂಡ್‌ನಲ್ಲಿ ವಾಸವ್ಯದಲ್ಲಿರುವ ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಹಾಗೂ ಗೀತಾ ಎಸ್.ಅಧಿಕಾರಿ ದಂಪತಿಗಳು ಕ್ಯಾಲಿಫೋರ್ನಿಯಾದಲ್ಲಿ ವಾಸ್ತವ್ಯದಲ್ಲಿರುವ ತಮ್ಮ ಪುತ್ರಿ ಪ್ರಸಿದಾ ಹಾಗೂ ಪೋರ್ಟ್‌ಲೇಂಡ್‌ನಲ್ಲಿರುವ ತಮ್ಮ ಪುತ್ರ ಪ್ರಸಾದ್ ಅಧಿಕಾರಿಯವರೊಂದಿಗೆ ವಾಸ್ತವ್ಯಕ್ಕಾಗಿ ತಾ.05-06-2012ರಂದು ಅಮೇರಿಕಾ ದೇಶಕ್ಕೆ ಪ್ರಯಾಣ ಮಾಡಲಿದ್ದಾರೆ.

## ಉದ್ಯೋಗವಾರ್ತೆ



**ಕು| ಪುನೀತಾ**

ಶ್ರೀ ಕೆ.ವಿ.ಆಚಾರ್ (ಸರ್ವೆಯರ್) ಮತ್ತು ಶ್ರೀಮತಿ ಶೈಲಜ ಈ ಹಿಂದೆ ಉಡುಪಿ ಚಿಟ್ಪಾಡಿ ಗೋಕುಲ್‌ದಾಸ್ ಕೌಂಪೌಂಡಿನಲ್ಲಿದ್ದು ಪ್ರಸ್ತುತ ಮೈಸೂರಿನ ಹೆಬ್ಬಾಳು 2ನೇ ಹಂತದಲ್ಲಿ ವಾಸವಾಗಿರುವ ಇವರ 2ನೇ ಪುತ್ರಿ ಪುನೀತಾ ವಿ.ಆಚಾರ್ ಇವರು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿನ ಡೆಲ್ ಇಂಡಿಯಾ ಇಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿ ನೇಮಕಗೊಂಡಿರುತ್ತಾರೆ. ಇವರ ಭವಿಷ್ಯ ಉತ್ತಮವಾಗಲಿ ಎಂದು ಶ್ರೀಶಾರದಾ ಬಳಗದ ಹಾರೈಕೆ.



**ಶ್ರೀಮತಿ ಕೀರ್ತಿ ಕಿರಣ್‌ರಾವ್**

ಬ್ರಹ್ಮಾವರದ ಶ್ರೀಮತಿ ಕೀರ್ತಿ ಕಿರಣ್ ರಾವ್ ಇವರು ತಾ.30-04-2012 ರಂದು ಭದ್ರಾವತಿಯ ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿ ನೌಕರಿಗೆ ಸೇರಿದ್ದಾರೆ. ಇವರು ಬ್ರಹ್ಮಾವರದ ಶ್ರೀಮತಿ ರಾಜೇಶ್ವರಿ ಮತ್ತು ಅಶೋಕ್ ರಾವ್ ದಂಪತಿಗಳ ಸೊಸೆ ಹಾಗೂ ಅಂಬಲಪಾಡಿಯ ಎಚ್.ಎನ್.ಶ್ಯಾನುಭಾಗ್ ಮತ್ತು ಶ್ರೀಮತಿ ಮಹಾಲಕ್ಷ್ಮಿ ಶಾನುಭಾಗ್ ದಂಪತಿಗಳ ಪುತ್ರಿ. ಇವರ ಭವಿಷ್ಯ ಉತ್ತಮವಾಗಲಿ ಎಂದು ಶ್ರೀಶಾರದಾ ಬಳಗದ ಹಾರೈಕೆ.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ : ಮರೆತು ಹೋಗುವುದು ಯಾಕೆ? ಜ್ಞಾಪಕ ಶಕ್ತಿ ಹೆಚ್ಚಿಸಿಕೊಳ್ಳಲು ಏನು ಮಾಡಬೇಕು?** ಡಾ| ವೈ. ಸುದರ್ಶನ ರಾವ್

**ಉತ್ತರ :** ಮರೆತುಹೋಗುವುದು ಮತ್ತು ನೆನಪಾಗುವುದು ನಮ್ಮ ಮೆದುಳಿಗಿರುವ ಒಂದು ವಿಶಿಷ್ಟ ಶಕ್ತಿ. .ಯಾವುದೇ ಒಂದು ಘಟನೆಯನ್ನು(event) ಅಥವಾ ಮಾಹಿತಿ (information)ಯನ್ನು ಅಥವಾ ಕಲಿತ ಪಾಠವನ್ನು (ಕಂಪ್ಯೂಟರ ಭಾಷೆಯಲ್ಲಿ ಹೇಳುವುದಾದರೆ application) ನಮ್ಮ ಮೆದುಳು ದೀರ್ಘಕಾಲದ ವರೆಗೆ ತನ್ನಲ್ಲಿ ಶೇಖರಿಸಿಟ್ಟುಕೊಂಡು ಅಗತ್ಯ ಬಂದಾಗ ನೆನೆಪಿಸಿಕೊಳ್ಳಬಲ್ಲ ಸಾಮರ್ಥ್ಯ ಹೊಂದಿದೆ. ಇದನ್ನು ಜ್ಞಾಪಕಶಕ್ತಿ (memory) ಎನ್ನುತ್ತೇವೆ.

ಜ್ಞಾಪಕ ಶಕ್ತಿಯ ಮುಖ್ಯಕೇಂದ್ರವಿರುವುದು ಮೆದುಳಿನ ಮುಂಭಾಗದಲ್ಲಿರುವ ಹಿಪ್ಪೊ ಕ್ಯಾಂಪಸ್ ಎಂಬ ಭಾಗದಲ್ಲಿ, ಆದರೆ ಯಾವುದೇ ಒಂದು ವಿಷಯವನ್ನು ಗ್ರಹಿಸುವುದು, ಅರ್ಥೈಸಿಕೊಳ್ಳುವುದು ಹಾಗೂ ಈ ಮಾಹಿತಿಯನ್ನು ನೆನಪಾಗಿ ಶೇಖರಿಸಿಟ್ಟುಕೊಂಡು ಬೇಕಾದಾಗ ನೆನೆಪಿಸಿಕೊಳ್ಳುವುದು ಇವಿಷ್ಟು ಜ್ಞಾಪಕದಲ್ಲಿಟ್ಟುಕೊಳ್ಳುವ ಪ್ರಕ್ರಿಯೆಯ ಹಂತಗಳು. ಈ ಪ್ರಕ್ರಿಯೆಯಲ್ಲಿ ಮೆದುಳಿನ ಎಲ್ಲಾ ಭಾಗಗಳೂ ಭಾಗವಹಿಸುತ್ತವೆ.

ಯಾವುದೇ ಒಂದು ಘಟನೆ ನೋಡಿದ/ಕೇಳಿದ ಸ್ವಲ್ಪ ಸಮಯದ ತನಕ ನಾವು ಅದನ್ನು ಮಂಡಿಗೆ ಹಾಕುತ್ತಿದ್ದು ನಂತರ ಅದನ್ನು ಮರೆತು ಬಿಡುತ್ತೇವೆಂಬುದನ್ನು ಗಮನಿಸಿರಿ. ಒಂದು ವೇಳೆ ಈ ಮರೆತು ಹೋಗುವುದೆಂಬುದು ಇಲ್ಲದೇ ಇದ್ದರೆ ಆ ವಿಷಯವನ್ನೇ ಪದೇ ಪದೇ ಮಂಡಿಗೆ ಹಾಕುತ್ತಾ ಇರಬೇಕಾಗುತ್ತಿತ್ತು ಹಾಗೂ ನಮಗೆ ಬೇರೆ ಯಾವುದೇ ಕೆಲಸದಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲವಾಗುತ್ತಿತ್ತೆಂಬುದನ್ನು ಗಮನಿಸಿರಿ. ಅಷ್ಟು ಮಾತ್ರವಲ್ಲದೆ ದುಃಖದ ಘಟನೆಗಳು ಬೇಸರಕ್ಕೂ ಹಾಗೂ ಸಂತೋಷದ ಘಟನೆಗಳನ್ನು ಮರೆಯದಿದ್ದರೆ ಉನ್ಮಾದದಂತಹ ಮನೋವಿಕಾರಕ್ಕೆ ದಾರಿ ಮಾಡಿಕೊಡುತ್ತವೆ. ಹಾಗಾಗಿ ಮರೆವು ಸಹಾ ನೆನಪಿನಷ್ಟೇ ಮುಖ್ಯ.

ಹೀಗೆ ಒಮ್ಮೆ ಗ್ರಹಿಸಿ ಮರೆತ ವಿಷಯವನ್ನು ಬೇಕಾದಾಗ ನೆನಪಿಸಿಕೊಳ್ಳುವುದೇ ಜ್ಞಾಪಕ ಶಕ್ತಿಯಲ್ಲಿರುವ ಪ್ರಮುಖ ಅಂಶ. ಬೆಂಕಿ ಮುಟ್ಟಿದರೆ ಬಿಸಿಯಾಗಿರುತ್ತದೆ ಎಂಬುದು ನಾವು ಸಣ್ಣದಿರುವಾಗ ನಾವೇ ಕಲಿತ ಪಾಠ. ಈ ಪಾಠವನ್ನು ನಮ್ಮ ಮೆದುಳು ಬೆಂಕಿಯನ್ನು ಕಂಡಾಗಲೆಲ್ಲ ನೆನಪಿಸಿಕೊಳ್ಳುವುದರಿಂದ ನಾವು ಬೆಂಕಿಗೆ ಕೈ ಹಾಕುವುದಿಲ್ಲ. ಮೆದುಳು ಇದನ್ನು ನೆನಪಿಸಿಕೊಂಡಿತೆಂಬುದು ನಮ್ಮ ಅರಿವಿಗೆ ಬಂದಿರುವುದಿಲ್ಲ ಅಲ್ಲವೇ. ಹಾಗೆಯೇ ಹಳೆಯ ಗೆಳೆಯ ಎಷ್ಟೋ ವರ್ಷಗಳ ನಂತರ ಎದುರಿಗೆ ಬಂದ ತಕ್ಷಣ ತನ್ನಿಂತಾನಾಗೆ ನೆನಪಾಗುವುದು ಜ್ಞಾಪಕ ಶಕ್ತಿಯ ಇನ್ನೊಂದು ಪರಿ. ಪರೀಕ್ಷೆಯಲ್ಲಿ ಬರೆಯಬೇಕಾದ ಉತ್ತರವನ್ನು ನಾವೇ ಪ್ರಯತ್ನಪಟ್ಟು ನೆನಪಿಸಿಕೊಳ್ಳುವುದು ಮೆದುಳು ವಿಷಯವೊಂದನ್ನು ಜ್ಞಾಪಿಸಿಕೊಳ್ಳುವ ಇನ್ನೊಂದು ಬಗೆ. ಹಾಗೆಯೆ ಮಾಡಬೇಕಾದ ಕೆಲಸವೊಂದು ಆ ಸಮಯಕ್ಕೆ ಸರಿಯಾಗಿ ಅದಾಗಿಯೇ ನೆನಪಿಗೆ ಬರುವುದು ಹಾಗೂ ನೆನಪಿಗೆ ಬರಬೇಕಾದ ವಿಷಯ ಸರಿಯಾದ ಸಂದರ್ಭದಲ್ಲೇ ನೆನಪಾಗುವುದು (ಉದಾ: ಎದುರಿಗೆ ಬಂದವರು ಯಾರೆಂಬುದು ಆಗಲೇ ನೆನಪಾಗಬೇಕಲ್ಲದೆ ಅವರು ಹೋದಮೇಲೆ ನೆನಪಾಗುವುದಲ್ಲ) ಇವೆರಡು ನಮಗಿರುವ ಜ್ಞಾಪಕ ಶಕ್ತಿಯ ವಿಶೇಷತೆಗಳು.

ಮೆದುಳು ಕೆಲವು ವಿಷಯಗಳನ್ನು ಸ್ವಲ್ಪ ಸಮಯ ಮಾತ್ರ ನೆನಪಿನಲ್ಲಿಟ್ಟುಕೊಳ್ಳುತ್ತದೆ( ಕೆಲವು ನಿಮಿಷಗಳಷ್ಟು ಕಾಲ ಮಾತ್ರ, ಉದಾ: ಇನ್ನೊಬ್ಬರು ಹೇಳುತ್ತಿರುವ ಪೋನ್ ನಂಬ್ರವನ್ನು ಬರೆದುಕೊಳ್ಳುವ ತನಕ ನೆನಪಿನಲ್ಲಿಟ್ಟುಕೊಳ್ಳುವುದು) ಹಾಗೂ ಕೆಲವು ವಿಷಯಗಳನ್ನು ತುಂಬ ಸಮಯ ಕಾಲ ನೆನಪಿನಲ್ಲಿಕೊಳ್ಳುತ್ತದೆ. ಮೆದುಳು ಯಾವ ವಿಷಯಯವನ್ನು ಯಾವ ರೀತಿ ನೆನಪಿಟ್ಟುಕೊಳ್ಳುತ್ತದೆಯೆಂಬುದನ್ನು ಹೀಗೆಯೇ ಎಂದು ಹೇಳಲಿಕ್ಕಾಗುವುದಿಲ್ಲವಾದರೂ, ಹಳೆಯ ಇದೇ ರೀತಿಯ ಅನುಭವಗಳು ಹಾಗೂ ಪುನರಾವರ್ತಿತವಾಗುತ್ತಿರುವ ವಿಷಯಗಳು ಹಾಗೂ ತೀವ್ರತೆ ಜಾಸ್ತಿ ಇರುವ ಸಂವೇದನೆಗಳು ( ಉದಾ: ತುಂಬ ತೀವ್ರವಾದ ನೋವು) ಹಾಗೂ ಅತೀ ಮುಖ್ಯವಾಗಿ ಭಾವೋದ್ವೇಗದ (emotional) ವಿಷಯಗಳನ್ನು ಮೆದುಳು ದೀರ್ಘಕಾಲ ನೆನಪಿನಲ್ಲಿಡುತ್ತದೆ. ಒಂದು ವಿಷಯವನ್ನು ನೆನಪಿನ ರೂಪದಲ್ಲಿ ಕಾಪಿಡುವ ಪ್ರಕ್ರಿಯೆಯಲ್ಲಿ ನಿದ್ದೆಗೂ ಒಂದು ಮುಖ್ಯ ಪಾತ್ರವಿದೆ.

ಒಂದು ವಿಷಯವನ್ನು ಗ್ರಹಿಸುವುದು, ಅರ್ಥೈಸಿಕೊಳ್ಳುವುದು ಹಾಗೂ ಈ ನೆನಪನ್ನು ಶೇಖರಿಸಿಟ್ಟುಕೊಂಡು ಬೇಕಾದಾಗ ನೆನಪಿಸಿಕೊಳ್ಳುವುದು ಹೀಗೆ ಈ ಜ್ಞಾಪಕ ಕ್ರಿಯೆಯ ಯಾವುದೇ ಒಂದು ಹಂತದಲ್ಲಿ ತೊಂದರೆಯಿದ್ದರೆ ಜ್ಞಾಪಕ ಶಕ್ತಿ ಸರಿಯಾಗಿರುವುದಿಲ್ಲ. ಮೆದುಳಿಗೆ ರಕ್ತ ಸಂಚಾರದ ಕೊರತೆ, ಮೆದುಳಿನ ಜೀವಕೋಶಗಳು ನಶಿಸುವುದು, ವೃದ್ಧಾಪ್ಯ , ಮೆದುಳಿನಲ್ಲಿ ಗಡ್ಡೆ ಬೆಳೆಯುವುದು , ಮೆದುಳಿನೊಳಗೆ ರಕ್ತಸ್ರಾವವಾಗುವುದು ,ಮಾನಸಿಕ ಖಾಯಿಲೆಗಳು, ರಕ್ತಹೀನತೆ ಹೀಗೆ ಅನೇಕ ನೂರಾರು ಖಾಯಿಲೆಗಳಿಂದಾಗಿ ಜ್ಞಾಪಕ ಶಕ್ತಿ ಕಡಿಮೆಯಾಗುತ್ತದೆ.

ಮರೆವು ಹೆಚ್ಚಾಗಲು ಯಾವುದಾದರು ಭೌತಿಕ ಕಾರಣಗಳಿದ್ದರೆ ಅದನ್ನು ಪತ್ತೆ ಹಚ್ಚಿ ಚಿಕಿತ್ಸೆ ನಡೆಸುವುದು, ಪೌಷ್ಠಿಕ ಆಹಾರದ ಸೇವನೆ, ನಿಯಮಿತ ಹಾಗೂ ಶಿಸ್ತುಬದ್ಧವಾದ ದಿನಚರಿ, ನಿರಾಳವಾದ ಮನಸ್ಸು ಹಾಗೂ ಸಾಕಷ್ಟು ನಿದ್ದೆ ಜ್ಞಾಪಕಶಕ್ತಿಯನ್ನು ವೃದ್ದಿಸಲು ತೆಗೆದುಕೊಳ್ಳಬಹುದಾದ ಸಾಮಾನ್ಯ ಕ್ರಮಗಳು. ಜ್ಞಾಪಕ ಶಕ್ತಿಯನ್ನು ಹೆಚ್ಚಿಸುವ ಕೆಲವು ಮನೋ ವ್ಯಾಯಾಮಗಳನ್ನು ಪರಿಣಿತರ ಸಲಹೆಯೊದಿಗೆ ಅಭ್ಯಸಿಸಬಹುದು. ಮಾಡಬೇಕಾದ ಕೆಲಸವನ್ನು ನಿತ್ಯವೂ ಡೈರಿಯಲ್ಲಿ ಬರೆದಿಡುವುದು, ಅಲಾರ್ಮ ಗಂಟೆಯನ್ನು ಉಪಯೋಗಿಸುವುದು ಇತ್ಯಾದಿ ಕ್ರಮಗಳು ಮರೆವಿನಿಂದಾಗಿ ಪೇಚುಬೀಳುವುದನ್ನು ತಪ್ಪಿಸಬಹುದೇ ವಿನಹಾ ಜ್ಞಾಪಕಶಕ್ತಿಯನ್ನು ವೃದ್ದಿಸುವುದಿಲ್ಲವೆಂಬುದನ್ನು ಗಮನಿಸಿರಿ. ಜ್ಞಾಪಕಶಕ್ತಿಯನ್ನು ವೃದ್ದಿಸುವ ಅನೇಕ ಔಷದಿಗಳು ಲಭ್ಯವಿವೆಯಾದರೂ ಅವುಗಳ ಸೇವನೆಯಿಂದಾಗುವ ಲಾಭ ಕಡಿಮೆ.

ಪಾಠವನ್ನು ಪದೇ ಪದೇ ಓದುವುದು ಹಾಗೂ ಪಾಠವೊಂದನ್ನು ಭಾವನಾತ್ಮಕವಾಗಿ ಓದುವುದರಿಂದ (ಉದಾ : ನಮ್ಮ ದೇಶದ ಸ್ವಾತಂತ್ರ್ಯ ಹೋರಾಟವನ್ನು ಚರಿತ್ರೆಯ ಪುಸ್ತಕದಲ್ಲಿ ಓದುವಾಗ ನಮ್ಮ ದೇಶಕ್ಕಾಗಿ ಬಲಿದಾನಗೈದವರ ಕಥೆ ಎಂದು ಮನಸ್ಸಿಗೆ ಭಾವನಾತ್ಮಕವಾಗಿ ತೆಗೆದುಕೊಂಡು ಓದುವುದು), ಮೆದುಳು ಆ ಪಾಠಗಳನ್ನು ದೀರ್ಘಕಾಲ ನೆನಪಿನಲ್ಲಿಡಬೇಕಾದ ವಿಷಯವೆಂದು ಗ್ರಹಿಸಿ ಆ ರೀತಿ ನೆನಪಿನಲ್ಲಿಟ್ಟುಕೊಳ್ಳುತ್ತದೆ. ಪರೀಕ್ಷೆಗೆ ಓದುವವರು ಜ್ಞಾಪಕ ಶಕ್ತಿ ಹೆಚ್ಚಿಸಿಕೊಳ್ಳಲು ಮೇಲೆ ಹೇಳಿದ ಉಪಾಯಗಳೊಂದಿಗೆ ಈ ಉಪಾಯವನ್ನೂ ಪರಿಗಣಿಸಬಹುದು.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322

# ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ

## ''ನಂದ ಗೋಕುಲ'', ಕಾರ್ಕಳ ರಸ್ತೆ, ಪಡುಬಿದ್ರಿ

**ಸಂಘದ ಉದ್ದೇಶಗಳು :**

1. ಸಮಾಜ ಬಾಂಧವರನ್ನು ಒಗ್ಗೂಡಿಸುವುದು.
2. ಸಮಾಜದ ನೆಲೆಯನ್ನು ಮತ್ತೆ ಕಂಡುಕೊಳ್ಳುವುದು.
3. ಸುಧಾರಣೆಯೊಂದಿಗೆ ಸಂಪ್ರದಾಯವನ್ನು ಪಾಲಿಸುವುದು.
4. ನಮ್ಮ ಸಂಘದ ವ್ಯಾಪ್ತಿಯಲ್ಲಿ ಅಗತ್ಯವಿದ್ದಾಗ ನಮ್ಮವರಿಗೆ ರಕ್ತದಾನ ಮಾಡುವುದು.
5. ನಮ್ಮ ಸಂಘದ ವ್ಯಾಪ್ತಿಯಲ್ಲಿ ಸಮಾಜದಲ್ಲಿ ತಲೆದೋರುವ ಆಕಸ್ಮಿಕ ಕಾಯಿಲೆಗಳಿಗೆ ಅಥವಾ ಅವಘಡಗಳಿಗೆ ಪ್ರತಿ ಊರಿನಲ್ಲೂ ಸಹಾಯಕ್ಕಾಗಿ 'ತುರ್ತುಕರೆ'ಗಾಗಿ ಸಮಾಜದ ಸ್ವಯಂಸೇವಕರ ನೇಮಕ.
6. ನಮ್ಮ ಸಂಘದ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ಕಡೆ ರೂ.25,000/- ಬಂಡವಾಳದ 'ತುರ್ತುನಿಧಿ 'ಯನ್ನು ಸ್ಥಾಪಿಸಲಾಗುವುದು ಮತ್ತು ಇತರ ಪ್ರಯೋಜನವನ್ನು ತೊಂದರೆಗೀಡಾದ ಸಮಾಜ ಬಾಂಧವರು ಒಂದು ತಿಂಗಳವರೆಗೆ ಉಪಯೋಗಿಸುವ ಅವಕಾಶವನ್ನು ಪಡೆದು ನಂತರ ಬಡ್ಡಿ ರಹಿತವಾಗಿ ಹಿಂತಿರುಗಿಸಬೇಕು. ಮುಂದೆ ಈ ಯೋಜನೆಯನ್ನು ಇನ್ನೊಂದು ಕಡೆಯಲ್ಲಿ ವಿಸ್ತರಿಸಲಾಗುವುದು. ತುರ್ತುನಿಧಿಗಾಗಿ 9902169119 ನಂದಗೋಕುಲ ಆಫೀಸ್ ಕಚೇರಿಯನ್ನು ಸಂಪರ್ಕಿಸಿ.
7. ಸಂಘದ ವ್ಯಾಪ್ತಿಯೊಳಗೆ ಬರುವ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪ್ರತೀ ವರ್ಷ ಪ್ರೋತ್ಸಾಹ-ಧನದೊಂದಿಗೆ ಗೌರವಿಸಲಾಗುವುದು.
8. ಸಂಘದ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಸಹಾಯ-ಧನವನ್ನು ಇತ್ತು ಪ್ರೋತ್ಸಾಹಿಸಲಾಗುವುದು. ಪಿ.ಯು.ಸಿ.-ರೂ.2,500, ಪದವಿ-ರೂ.5,000, ಇಂಜಿನಿಯರಿಂಗ್ ಮತ್ತು ವೈದ್ಯಕೀಯ-ರೂ.10,000
9. ಇದಲ್ಲದೇ ಪ್ರಸಕ್ತ ವರ್ಷದಿಂದ ಮದುವೆ ಕಾರ್ಯದಲ್ಲಿ ಆರ್ಥಿಕವಾಗಿ ಹಿಂದುಳಿದು ಸಹಾಯ-ಧನವನ್ನು ಅಪೇಕ್ಷಿಸುವಲ್ಲಿ ರೂ.20,000 ಮೊಬಲಗನ್ನು ಕೊಡುವ ಯೋಜನೆಯಿದೆ.
10. ಇದಲ್ಲದೇ ಮೇಲಿನ ಎಲ್ಲಾ ಅಂಶಗಳನ್ನು ಸಂಘ ಬಲಾಢ್ಯವಾಗಿ ಬೆಳೆದ ನಂತರ ನಮ್ಮ ಇಡೀ ಸಮಾಜಕ್ಕೆ ವಿಸ್ತರಿಸುವ ಆಶಯವಿದೆ.
11. ಸಂಘವು ಎಂದೂ 'Donation' ಎಂಬ ಪದಕ್ಕೆ ಕಟ್ಟು ಬೀಳದೆ ಸ್ವತಃ ಮುಂದೆ ಬರುವ ದಾನಿಗಳ ಬೆಂಬಲವನ್ನು ಪಡೆಯುತ್ತದೆ.
12. ಸ್ವಂತ ಉದ್ಯೋಗ ಮಾಡುವ ಸಮಾಜ ಬಾಂಧವರಿಗೆ ಪ್ರೋತ್ಸಾಹ ಅಥವಾ ಧನ ಸಹಾಯ ಮಾಡುವ ಬಗ್ಗೆ ಮುಂದಿನ ದಿನಗಳಲ್ಲಿ ಚಿಂತಿಸಲಾಗುವುದು.

# ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ

## ಮಹಾಸಭೆ

ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ ಇದರ ಮಹಾಸಭೆಯು ತಾ.27-05-2012ರಂದು ಶ್ರೀ ರಾಜರಾಜೇಶ್ವರಿ ಸಭಾಭವನ ಎರ್ಮಾಳು ಇಲ್ಲಿ ಬೆಳಿಗ್ಗೆ 9-00ರಿಂದ ಸಂಘದ ಅಧ್ಯಕ್ಷರಾದ ಶ್ರೀ ಎಂ.ಕೆ.ಮೋಹನ ರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಸಂಘದ ವ್ಯಾಪ್ತಿಗೆ ಬರುವ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಹಾಗೂ ಪದವಿ ವಿಭಾಗದಲ್ಲಿ ಅತ್ಯಧಿಕ ಅಂಕ ಪಡೆದವರಿಗೆ ನಗದು ಪುರಸ್ಕಾರ ನೀಡಲಾಗುವುದು. ಅರ್ಹರು ತಮ್ಮ ಅಂಕ ಪಟ್ಟಿಯನ್ನು ಸ್ಥಾನಿಕ ಬ್ರಾಹ್ಮಣ ಸಭಾ ನಂದಗೋಕುಲ, ಪಡುಬಿದ್ರಿ ಇವರಿಗೆ ತಾ.23-05-2012ರ ಮೊದಲು ಕಳುಹಿಸಿಕೊಡಬೇಕಾಗಿ ವಿನಂತಿ. ಈಗಾಗಲೇ ವಿದ್ಯಾರ್ಥಿ ವೇತನ ಪಡೆಯುತ್ತಿದ್ದ ಫಲಾನುಭವಿಗಳಿಗೆ 2012-13ನೇ ಸಾಲಿನ ವಿದ್ಯಾರ್ಥಿ ವೇತನವನ್ನು ವಿತರಿಸಲಾಗುವುದು ಎಂದು ಸಂಘದ ಕಾರ್ಯದರ್ಶಿ ಸುಧಾಕರ ಬೆಳ್ಳೆ ತಿಳಿಸಿರುತ್ತಾರೆ.


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)


# ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

## ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.07-06-2012) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.26-05-2012 ಚೈತ್ರ ಶುದ್ಧ ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.05-06-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

# ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ

**ಕೋಡಿಂಬಾಡಿ-ಪುತ್ತೂರು ತಾಲೂಕು, ದ.ಕ. ದೂರವಾಣಿ: 08251-261010, ಮೊ. : 9901247080**

## ಸಮಾಜ ಬಾಂಧವರಲ್ಲಿ ವಿನಂತಿ

ಆತ್ಮೀಯ ಭಗವದ್ಭಕ್ತರೇ,

ಪುತ್ತೂರು ತಾಲೂಕಿನ ಕೋಡಿಂಬಾಡಿ ಸಮೀಪ ಇರುವ ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನವನ್ನು ಸುಮಾರು ನೂರು ವರ್ಷಗಳ ಹಿಂದೆ 31-03-1915 ರಲ್ಲಿ ಸಾಮಾನ್ಯ ರೀತಿಯಲ್ಲಿ ಮಠದಬೆಟ್ಟು ದಿ| ಸುಬ್ರಾಯರು ಕಟ್ಟಿಸಿದ್ದು ತಂತ್ರಿಗಳಾದ ದಿ| ಕುರಯ ನಾರಾಯಣಾಚಾರ್ಯರ ನೇತೃತ್ವದಲ್ಲಿ ಬ್ರಹ್ಮಕಲಶ ನೆರವೇರಿಸಿದ್ದರು.

ಶ್ರೀ ದೇವಳದಲ್ಲಿ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನವರಾತ್ರಿ ಉತ್ಸವ, ಚಂಡಿಕಾಹೋಮ, ಅನ್ನಸಂತರ್ಪಣೆ, ವಾರ್ಷಿಕ ಉತ್ಸವ, ವಿನಾಯಕ ಚತುರ್ಥಿ, ಋಗುಪಾಕರ್ಮ, ದೀಪಾವಳಿ, ಧನುಪೂಜೆ, ಪತ್ತನಾಜೆ ಹಾಗೂ ನಿತ್ಯಪೂಜೆ ಹೀಗೆ ಹಲವು ಕಾರ್ಯಕ್ರಮಗಳು ನಡೆದುಕೊಂಡು ಬರುತ್ತಿದೆ. ಶ್ರೀ ಕ್ಷೇತ್ರಕ್ಕೆ ಬರುತ್ತಿರುವ ಭಕ್ತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು ಭಕ್ತರ ಮನಸ್ಸಿನ ಸಂಕಲ್ಪವನ್ನು ಶ್ರೀ ದೇವಿಯು ಈಡೇರಿಸುತ್ತಿದ್ದಾಳೆ.

ಪ್ರಕೃತ ದೇವಾಲಯದ ಗೋಡೆ, ಮಾಡುಗಳೆಲ್ಲ ಶಿಥಿಲಗೊಂಡಿರುವುದರಿಂದಲೂ ಹಾಗೂ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಿರುವುದರಿಂದ ದೇವಾಲಯದ ಸಮಗ್ರ ಜೀರ್ಣೋದ್ಧಾರಗೊಳಿಸಬೇಕೆಂಬ ದೃಷ್ಠಿಯಿಂದ ಜೀರ್ಣೋದ್ಧಾರ ಸಮಿತಿಯೊಂದನ್ನು ರಚಿಸಲಾಗುವುದು.

ಈ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ಕೆ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಯಂಗಳ ಪರಿಪೂರ್ಣ ಅನುಗ್ರಹ ಪಡೆದು ಧಾರ್ಮಿಕ ವಿಧಿ ವಿಧಾನವನ್ನು ಪಾವಂಜೆ ಬ್ರಹ್ಮಶ್ರೀ ವೇದಮೂರ್ತಿ ತಂತ್ರಿಗಳಾದ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನಡೆಸಲಾಗುವುದು.

ಖ್ಯಾತ ವಾಸ್ತು ತಜ್ಞರಾದ ಶ್ರೀ ಮುನಿಯಂಗಳ ಕೃಷ್ಣ ಪ್ರಸಾದ್‌ರವರ ಮಾರ್ಗದರ್ಶನ ದಲ್ಲಿ ದೇವಾಲಯದ ಕಾಮಗಾರಿಗಳನ್ನು ನಡೆಸಲಾಗುವುದು. ಈ ದೇವಾಲಯಕ್ಕೆ ಯಾವುದೇ ಆದಾಯ ಬರುವ ಮೂಲಗಳಿರುವುದಿಲ್ಲ. ಉದಾರಿಗಳಾದ ಭಕ್ತಾದಿಗಳಿಂದಲೇ ಧನ ಸಂಗ್ರಹಿಸಿ ಕಾರ್ಯ ಪೂರೈಸಬೇಕಾಗಿರುತ್ತದೆ. ಶಿಲಾಮಯ ಗರ್ಭಗುಡಿ, ಗಣಪತಿ ಗುಡಿ, ದೈವಗಳ ಗುಡಿ, ನಾಗನಕಟ್ಟೆ, ಸುಂದರವಾದ ಸಭಾಭವನ ಇತ್ಯಾದಿ ಕಾಮಗಾರಿಗಳಿಗೆ ಸುಮಾರು ಅಂದಾಜು ವೆಚ್ಚ ರೂ.1 ಕೋಟಿ 50 ಲಕ್ಷ ಬೇಕಾಗಬಹುದೆಂದು ಊಹಿಸಲಾಗಿದೆ. ಆದುದರಿಂದ ಸಹೃದಯ ಭಕ್ತ ಜನರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಜೀರ್ಣೋದ್ಧಾರ ಕಾರ್ಯ ಶೀಘ್ರವಾಗಿ, ನಿರ್ವಿಘ್ನವಾಗಿ ನಡೆಯುವರೇ ತಾವು ತನು-ಮನ-ಧನಗಳಿಂದ ಸಹಕಾರ ನೀಡಿ ಈ ಕಾರ್ಯದಲ್ಲಿ ಭಾಗಿಗಳಾಗಿ ಶ್ರೀ ರಾಜರಾಜೇಶ್ವರೀ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ. **-ಆಡಳಿತ ಮಂಡಳಿ**